RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎಸ್. ಓಲೇಕಾರ | ಸಿಇಒ: ಚಂದ್ರಶೇಖರ ಎಸ್.ಕೆ. | ಸಹ ಸಂಪಾದಕರು: ಶಿವಕುಮಾರ

# ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ | ನೇರ ನಿಖರ ನಿರ್ದಿಷ್ಟ

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ಹರಿಹರ ನಗರಕ್ಕೆ ಸಿಟಿ ಬಸ್ ಸೌಲಭ್ಯ ಕಲ್ಪಿಸಲು ಕರವೇ ಒತ್ತಾಯ 2

ಸಂತ–ಶರಣರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಿ 3

ಅಗತ್ಯದ ಹೆಸರಿನಲ್ಲಿ ಆಸೆಗಳ ಖರೀದಿ ಕೈತಪ್ಪುತ್ತಿರುವುದು ವಸ್ತುವಲ್ಲ ಹಣ! 4

ಸಂಪುಟ (Volume): 1 ಸಂಚಿಕೆ (Issue): 186 ಪುಟ (Page): 4 ದರ Rs. 2 ಭಾನುವಾರ 27 ಸೆಪ್ಟೆಂಬರ್ 2026 ● 27 SEPTEMBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

## ಮೇಲ್ಸೇತುವೆಯಲ್ಲಿ ಕತ್ತಲು ವಾಹನ ಸವಾರರಿಗೆ ದಿಗಿಲು

**ಸಮಾಲೋಚನೆ ರಾ ಸುದ್ದಿ ವಿಶೇಷ**

**ನಿರ್ವಹಣೆ ಇಲ್ಲದೆ ವಿದ್ಯುತ್ ಕಂಬಗಳು ಬಂದ್**

**ರಾತ್ರಿ ಸಂಚಾರ–ಕ್ಕೆ ಅಪಾಯ, ಅಧಿಕಾರಿಗಳ ವಿರುದ್ಧ ಆಕ್ರೋಶ**

ಗಣೇಶ ಎಸ್.ಎ ಬ್ಯಾಡಗಿ

ಮೋಟೆಬೆನ್ನೂರಗ್ರಾಪಂನಿರ್ಲಕ್ಷ್ಯದಿಂದ ಪಟ್ಟಣದ ಮೋಟೆಬೆನ್ನೂರ–ಬ್ಯಾಡಗಿ ರಸ್ತೆಯಲ್ಲಿ (ಗಜೇಂದ್ರಗಡ ಸೊರಬ ರಾಜ್ಯ ಹೆದ್ದಾರಿ) ನಿರ್ಮಿಸಲಾಗಿರುವ ರೈಲ್ವೇ ಮೇಲ್ಸೇತುವೆಯ ವಿದ್ಯುತ್ ದೀಪಗಳು ನಿರ್ವಹಣೆ ಕೊರತೆಯಿಂದಾಗಿ ಹಲ ವು ತಿಂಗಳಿನಿಂದ ಬೆಳಗದೆ ಬಂದ್ ಆಗಿದ್ದು, ವಾಹನ ಸವಾರರು ರಾತ್ರಿ ವೇಳೆ ಮೇಲ್ಸೇತುವೆ ಮೇಲೆ ಸಂಪೂರ್ಣ ಕತ್ತಲಿನಲ್ಲೆ ಓಡಾಡುವಂತಹ ಪರಿಸ್ಥಿತಿ ನಿರ್ಮಾ ಣವಾಗಿದೆ.

ಮೋಟೆಬೆನ್ನೂರ ಗ್ರಾಮದಿಂದ ಪಟ್ಟಣದಲ್ಲಿ ಹಾದು ಹೋಗಿರುವ ಗಜೇಂದ್ರಗಡ ಸೊರಬ ರಾಜ್ಯ ಹೆದ್ದಾರಿಯಲ್ಲಿನ ರೈಲ್ವೇ ಮೇಲ್ಸೇತುವೆಯ ಎರಡು ಬದಿಯಲ್ಲಿನ ವಿದ್ಯುತ್ ದೀಪಗಳು ಬಂದ ಆಗಿರುವ ಕಾರಣ 3 ಕೀಮಿ ರಸ್ತೆ ಸಂಪೂ ರ್ಣ ಕತ್ತಲುಮಯವಾಗಿದ್ದು, ವಾಹನ ಸಂಚಾರ ದುಸ್ತರಾವಾಗಿ ಪರಿಣಮಿಸಿದೆ.

**ಪ್ರತಿದಿನ ಸಾವಿರಾರು ವಾಹನ ಸಂಚಾರ:**ರಾಜ್ಯ ಹೆದ್ದಾರಿಯಾದ ಪರಿಣಾಮ, ಮೋಟೆಬೆನ್ನೂರ ಕಡೆಯಿಂದಹಾಗೂಬ್ಯಾಡಗಿಕಡೆಯಿಂದಮೋಟೆಬೆನ್ನೂರಕಡೆಗೆಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತವೆ, ಪ್ರಮುಖ ರಸ್ತೆಯಾಗಿರುವ ಈ ಮೇಲ್ಸೇತುವೆಯಲ್ಲಿ ರಾತ್ರಿ ಸಮಯದಲ್ಲಿ ಸಮರ್ಪಕ ಬೆಳಕಿನ ವ್ಯವಸ್ಥೆ ಇಲ್ಲದಿರುವುದು ವಾಹನ ಸವಾರರಿಗೆ ಕಂಟಕ ತಂದೊಡ್ಡುವ ಸ್ಥಿತಿ ಉಂಟಾಗಿದೆ.

**ಅಪಘಾತದ ಆತಂಕ:**ಬೆಳಗದ ವಿದ್ಯುತ್ ದೀಪಗಳಿಂದ ಎದುರಿನಿಂದ ಬರುವ ವಾಹನಗಳ ಬೆಳಕಿನ ನಡುವೆ ಸಂಚರಿ ಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ವಿಶೇಷವಾಗಿ ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳಿಗೆ ಕತ್ತಲಿ ನಲ್ಲಿ ಸಂಚರಿಸುವುದು ಸವಾಲಾಗಿ ಪರಿಣಮಿಸಿದೆ. ಮೇಲ್ಸೇತುವೆಯಲ್ಲಿರುವ ವಿದ್ಯುತ್ ಕಂಬಗಳು ಇದ್ದರೂ ಅವುಗಳಿಂದ ಬೆಳಕು ಮಾತ್ರ ಕಾಣಿಸುತ್ತಿಲ್ಲ. ಸಾರ್ವಜನಿಕರ ಸುರಕ್ಷತೆ–ಗಾಗಿ ಅಳವಡಿಸಿರುವ ದೀಪಗಳ ನಿರ್ವಹಣೆಗೆ ಸಂಬಂಧಿಸಿದ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿರುವುದು ಅಪಘಾತ ಸಂಭವಿಸುವ ಆತಂಕ ತಂದೊಡ್ಡಿದೆ.

**2024 ರಲ್ಲಿ ಗ್ರಾಪಂಗೆ ಹಸ್ತಾಂತರ:** ಸೇತುವೆ ನಿರ್ಮಾಣ ಮಾಡಿದ ಒಂದು ವರ್ಷದವರೆಗೆ ನಿರ್ವಹಣೆ ಸಂಬಂಧಪಟ್ಟ ರೈಲ್ವೇ ಇಲಾಖೆ ನಿರ್ವಹಣೆ ಮಾಡಿದ್ದು ನಂತರ 2024 ರಲ್ಲಿಯೇ ಮೋಟೆಬೆನ್ನೂರ ಪಂಚಾಯತಿಗೆ ರಸ್ತೆ ನಿರ್ವಹಣೆ ಕೆಲಸವನ್ನ ಹಸ್ತಾಂತರ ಮಾಡಲಾಗಿದೆ. ಪ್ರತಿ ಇದೇ ಮಾರ್ಗದಲ್ಲಿ ಪಿಡಿಒ ಸೇರಿದಂತೆ ಅಧಿಕಾರಿಗಳು ಸಂಚಾರ ಮಾಡಿ ದರೂ ಸಹ ಇಲ್ಲಿವಯರೆಗೂ ನಿರ್ವಹಣೆ ಕರ‍್ಯ ಸಪರ್ಮಕವಾಗಿ ನಡೆಸಿಲ್ಲ.

**ಗ್ರಾಪಂಗೆ ಎಷ್ಟು ದಿನ ಬೇಕು ದುರಸ್ತಿಗೆ:**"ಸಾರ್ವಜನಿಕರ ಸುರಕ್ಷತೆಗಾಗಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ವ್ಯವಸ್ಥೆ ಕಲ್ಪಿಸಿದರೆ ಸಾಲದು.ಅವುಗಳನ್ನುನಿರಂತರವಾಗಿ ನಿರ್ವಹಿಸುವಜವಾಬ್ದಾರಿಯೂಅಧಿಕಾರಿಗಳಮೇಲಿದೆ. ವಿದ್ಯುತ್ ದೀಪಗಳು ಕೆಟ್ಟು ಹಲವು ತಿಂಗಳುಗಳೇ ಕಳೆದು ಹೋಗಿ ಸಾರ್ವಜನಿಕರು ದೂರು ನೀಡಿದ್ದರು ಸಹ ಸಂಬಂಧಪಟ್ಟ ಮೋಟೆಬೆನ್ನೂರ ಗ್ರಾಪಂ ಇಲ್ಲಿವರೆಗೂ ದುರಸ್ತಿ ಏಕೆ ಮಾಡಿಸಿಲ್ಲ?" ಎಂಬುದು ವಾಹನ ಸವಾರರ ಪ್ರಶ್ನೆಯಾಗಿದೆ.

ಅಪಘಾತವಾದ ಮೇಲೆ ಎಚ್ಚೆತ್ತುಕೊಳ್ಳುವಿರಾ.?ಮೇಲ್ಸೇತುವೆಯ ವಿದ್ಯುತ್ ದೀಪಗಳನ್ನು ಕೂಡಲೇ ಪರಿಶೀಲಿಸಿ, ಕೆಟ್ಟುಹೋ ಗಿರುವ ದೀಪಗಳನ್ನು ದುರಸ್ತಿ ಮಾಡಬೇಕು. ರಾತ್ರಿ ವೇಳೆ ಮೇಲ್ಸೇತುವೆಯಲ್ಲಿ ಸುರಕ್ಷಿತ ಸಂಚಾರಕ್ಕೆ ಅಗತ್ಯವಿರುವಷ್ಟು ಬೆಳಕಿನ ವ್ಯವಸ್ಥೆ ಕಲ್ಪಿಸುವ ಮೂಲಕ ಸಂಭವನೀಯ ಅಪಘಾತಗಳನ್ನು ತಪ್ಪಿಸಬೇಕಾಗಿದ್ದರೂ ಸಹ ಮೋಟೆಬೆನ್ನೂರಗ್ರಾಪಂಪಿಡಿಒಹಾಗೂಅಧಿಕಾರಿಗಳುಇದರಬಗ್ಗೆಗಮನ ಹರಿಸದೇ ಉಳಿದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಕೂಡಲೇ ಅಧಿಕಾರಿಗಳು ಎಚ್ಚೆತ್ತುಕೊಂಡು ಮೇಲ್ಸೇತುವೆಯ ವಿದ್ಯುತ್ ದೀಪಗಳ ಸಮಸ್ಯೆಗೆ ಶಾಶ್ವತ ಪರಿ ಹಾರ ಕಲ್ಪಿಸುವರೇ ಎಂಬುದನ್ನು ಕಾದು ನೋಡಬೇಕಿದೆ.



ಕಳೆದ ಮಾರ್ಚ 2024 ರಲ್ಲೆ ಮೋಟೆಬೆನ್ನುರ ಗ್ರಾಮ ಪಂಚಾಯತಿಗೆ ಮೇಲ್ಸೆತುವೆ ವಿದ್ಯುತ್ ದೀಪಗಳನ್ನ ಹಸ್ತಾಂತರ ಮಾಡಲಾಗಿದೆ, ಅವರೇ ಅವುಗಳನ್ನ ನಿರ್ವಹಣೆ ಮಾಡಬೇಕು.
। ಟಿ. ಶ್ರೀಧರ, ಹಿರಿಯ ಅಭಿಯಂತರು ರೈಲ್ವೆ ಇಲಾಖೆ ಬೆಂಗಳೂರು

ಹೆಚ್ಚು ವಾಹನ ದಟ್ಟಣೆ ಇರುವ ರಾಜ್ಯ ಹೆದ್ದಾರಿ ರಸ್ತೆಯಲ್ಲಿನ ದೀಪಗಳು ಬಂದ್ ಆಗಿದ್ದರೂ ಸಹ ಮೋಟೆಬೆನ್ನೂರ ಪಿಡಿಒ ದುರಸ್ತಿ ಮಾಡಿಸದೇ ಇಷ್ಟೊಂದು ಬೇಜವಾಬ್ದಾರಿತನ ಹಾಗೂ ನಿರ್ಲಕ್ಷ್ಯ ವಹಿಸುತ್ತಿರುವುದೇಕೆ? ವಾಹನ ಸವಾರರ ಜೀವಕ್ಕೆ ಬೆಲೆ ಇಲ್ಲವೇ? ಕೂಡಲೇ ಮೋಟೆಬೆನ್ನೂರ ಗ್ರಾಪಂ ದೀಪಗಳ ದುರಸ್ತಿ ಮಾಡಿಸಿ.
। ಕರಬಸಪ್ಪ ಹಳ್ಳಿ ಸಾರ್ವಜನಿಕ

## ಎಲ್‌ನಿನೋ ಎಫೆಕ್ಟ್, ಮುನ್ನೆಲೆಗೆ ಬಂದ ಕೋಡಿ ಶ್ರೀಗಳ ಭವಿಷ್ಯ

**ಬೆಂಗಳೂರು:** ಅಮೆರಿಕದ ಕ್ಲೈಮೇಟ್ ಇಂಪ್ಯಾಕ್ಟ್ ಲ್ಯಾಬ್ ಅಧ್ಯಯನದ ಪ್ರಕಾರ, ಸೂಪರ್ ಎಲ್ ನಿನೋ ಎಫೆಕ್ಟ್, ಭಾರತ–ಕ್ಕೆ ಬಹುವಾಗಿ ಕಾಡಲಿದೆ. ಈ ಅಧ್ಯಯನದ ವರದಿಯ ಪ್ರಕಾರ, ದಕ್ಷಿಣ ಭಾರತದ ರಾಜ್ಯಗಳು ಇದರಿಂದ ಹೆಚ್ಚು ಅಪಾಯಕ್ಕೆ ಸಿಲುಕಲಿದೆ. ಈ ವರದಿ ವೈರಲ್ ಆದ ಬೆನ್ನಲ್ಲೇ, ಕೋಡಿಮಠದ ಶ್ರೀಗಳು ವಾರದ ಹಿಂದೆ ಹೇಳಿದ್ದ ಭವಿಷ್ಯ ಮತ್ತೆ ಮುನ್ನಲೆಗೆ ಬಂದಿದೆ.

'ಕಟ್ಟೆಯಿಲ್ಲದ ಬಾವಿ ಹುಟ್ಟಿ, ನೆಟ್ಟನೀ ಸುರಂಗವ ಕೊರೆದು, ಗಟ್ಟಿಭೂಮಿ ಬಟ್ಟಬಯಲಾಯ್ತು' ಎಂದು ಕೋಡಿಮಠದ ಶ್ರೀಗಳು ಹೇಳಿದ್ದರು. ಈಗ, ಚಿಕಾಗೋ ವಿಶ್ವವಿದ್ಯಾಲಯದ ವರದಿಯ ಪ್ರಕಾರ, ಎಲ್ ನಿನೋ ಎಫೆಕ್ಟ್ ಭಾರತದಲ್ಲಿ ಕಾಡಲಿದೆ. ಅದರಲ್ಲೂ ದಕ್ಷಿಣದ ರಾಜ್ಯಗಳು ಎಂದು ವರದಿಯಲ್ಲಿ ಉಲ್ಲೇಖವಾಗಿದೆ. ಆದರೆ, ಕೋಡಿಮಠದ ಶ್ರೀಗಳ ಭವಿಷ್ಯಕ್ಕೂ, ಎಲ್ ನಿನೋ ವರದಿಗೂ ವ್ಯತ್ಯಾಸವಿದೆ. ಏನದು?

**ಚಿಕಾಗೋ ವಿಶ್ವವಿದ್ಯಾಲಯದ ಎನರ್ಜಿ ಪಾಲಿಸಿ ಇನ್ಸಿಟ್ಯೂಟ್ ಸಂಶೋಧನಾ ವಿಭಾಗ:** ಅಮೆರಿಕದ ಚಿಕಾಗೋ ವಿಶ್ವವಿದ್ಯಾಲಯದ ಎನರ್ಜಿ ಪಾಲಿಸಿ ಇನ್ಸಿಟ್ಯೂಟ್ ಸಂಶೋಧನಾ ವಿಭಾಗದ ಕ್ಲೈಮೇಟ್ ಇಂಪ್ಯಾಕ್ಟ್ ಲ್ಯಾಬ್ ವರದಿಯೊಂದನ್ನು ಬಿಡುಗಡೆ ಮಾಡಿತ್ತು. ಅದರಲ್ಲಿ ಉಲ್ಲೇಖವಾದಂತೆ, ಜಾಗತಿಕವಾಗಿ ತಾಪಮಾನವು ಸಾಮಾನ್ಯಕ್ಕಿಂತ 1.2 ಡಿಗ್ರಿ ಸೆಲ್ಸಿಯಸ್'ನಷ್ಟು ಹೆಚ್ಚಲಿದೆ. ಇದು, ಉಷ್ಣತೆಯ ತೀವ್ರತೆಯಿಂದಾಗಿ, ಹವಾಮಾನ ಬದಲಾವಣೆಗೆ ಕಾರಣವಾಗಲಿದೆ. ಇದು ಭಾರತದ ಮುಂಗಾರಿನ ಮೇಲೆ ಪರಿಣಾಮವರನ್ನು ಬೀರಲಿದ್ದು, ಸುಮಾರು 15,800 ಸಾವು ಸಂಭವಿಸಬಹುದು, ಇದರ ಎಫೆಕ್ಟ್ ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಹೆಚ್ಚು ಎನ್ನುವ ಮುನ್ಸೂಚನೆಯನ್ನು ವರದಿಯಲ್ಲಿ ನೀಡಲಾಗಿದೆ.

**ಕೋಡಿಮಠದ ಶ್ರೀಗಳು ನುಡಿದಿದ್ದ ಭವಿಷ್ಯವೇನು?:** ಇನ್ನೊಂದು ಕಡೆ ಕೋಡಿಮಠದ ಶ್ರೀಗಳು ಭವಿಷ್ಯವನ್ನು ನುಡಿಯುತ್ತಾ, "ನೇಪಾಳದಲ್ಲಿ ಉಂಟಾದಂತಹ ಭೀಕರ ಪ್ರವಾಹದ ರೀತಿಯಲ್ಲೇ ದಕ್ಷಿಣ ಭಾರತದಲ್ಲೂ ಆಗಲಿದೆ. ಸಮುದ್ರದ ನೀರು ಒಳನುಗ್ಗಿ, ಊರಿಗೆ ಊರೇ ಮುಳುಗಿ ಹೋಗಲಿದೆ. ವಿಪರೀತ ಪ್ರವಾಹಗಳು ಅಪ್ಪಳಿಸಲಿದೆ, ಮುಂದೆ ಇನ್ನಷ್ಟು ಕಷ್ಟಗಳು ಹೆಚ್ಚಾಗಲಿದೆ" ಎಂದು ಹಾಸನ ಜಿಲ್ಲೆ ಅರಸೀಕೆರೆ ಹಾರನಹಳ್ಳಿ, ಕೋಡಿಮಠ ಸಂಸ್ಥಾನದ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿಗಳು ಭವಿಷ್ಯವನ್ನು ನುಡಿದಿದ್ದರು.





**ಎಲ್ ನಿನೋ ವರದಿಗೂ, ಕೋಡಿಶ್ರೀಗಳ ಭವಿಷ್ಯದ ನಡುವೆ ಇರುವ ವ್ಯತ್ಯಾಸವೇನು?:** ಎನ್ ನಿನೋ ವರದಿ ಮತ್ತು ಕೋಡಿಶ್ರೀಗಳ ಭವಿಷ್ಯವನ್ನು ಒಂದಕ್ಕೊಂದು ತುಲನೆ ಮಾಡಲಾಗುತ್ತಿದೆ. ವರದಿಯಲ್ಲೂ ಮತ್ತು ಕೋಡಿಶ್ರೀಗಳ ಭವಿಷ್ಯದಲ್ಲಿ ಸಂಕಷ್ಟ ಎದುರಾಗಲಿದೆ ಎನ್ನುವುದು ಸ್ಪಷ್ಟವಾಗಿದೆ. ಆದರೆ, ಕೋಡಿಶ್ರೀಗಳ ಭವಿಷ್ಯದಲ್ಲಿ ಪ್ರವಾಹ, ಜಲಪ್ರವಾಹ ಎಂದು ಹೇಳಿದ್ದಾರೆ. ವರದಿಯಲ್ಲಿ ಅನಾವೃಷ್ಟಿ, ತಾಪಮಾನದ ಏರಿಕೆ ಎಂದು ಉಲ್ಲೇಖವಾಗಿದೆ. ಎರಡರಲ್ಲೂ, ಸಾವುನೋವಿನ ಬಗ್ಗೆ ಉಲ್ಲೇಖವಾಗಿದೆ. ಇನ್ನೊಂದು ಕಡೆ, ಕೋಡಿಶ್ರೀಗಳ ಭವಿಷ್ಯದ ಪ್ರಕಾರ, 'ಮುಂಗಾರು ಮಳೆ ವಿರಳವಾಗಿದ್ದರೂ, ರೈತರು ಕುಗ್ಗುವ ಅವಶ್ಯಕತೆಯಿಲ್ಲ. ಹಿಂಗಾರು ಮಳೆ ಉತ್ತಮವಾಗಿ ಸುರಿಯಲಿದೆ. ನಾಡಿನ ಕೆರೆ–ಕಟ್ಟೆಗಳೆಲ್ಲವೂ ಭರ್ತಿಯಾಗಲಿವೆ. ಮುಂಗಾರಿನಲ್ಲಿ ಬೆಳೆ ಕಳೆದುಕೊಂಡ ರೈತರಿಗೆ ಹಿಂಗಾರು ಮಳೆಯಿಂದ ಪರಿಹಾರ ಸಿಗಲಿದೆ' ಎಂದು ಹೇಳಿದ್ದರು.

ಮತ್ತೊಂದು ಕಡೆ ಎಲ್ ನಿನೋ ಅಧ್ಯಯನದ ವರದಿ ಪ್ರಕಾರ, ಡಿಸೆಂಬರ್ 2026 – ಫೆಬ್ರವರಿ 2027ರ ಅವಧಿಯಲ್ಲಿ ಸುಮಾರು 7,400ಕ್ಕೂ ಸಾವು ಸಂಭವಿಸಬಹುದು. ಇತರ ಪ್ರದೇಶಗಳಲ್ಲಿ ಇದರ ಭೀಕರತೆ ಕಡಿಮೆಯಾಗುತ್ತಾ ಬಂದರೂ, ಭಾರತದಲ್ಲಿ ಇದರ ಅಪಾಯ ಕಮ್ಮಿಯಾಗುವುದಿಲ್ಲ. ಚಳಿಗಾಲದಲ್ಲಿ ದಕ್ಷಿಣ ಭಾರತದ ಹವಾಮಾನದಲ್ಲಿ ಬದಲಾವಣೆ ಆಗುವುದರಿಂದ, ಎಫೆಕ್ಟ್ ಜಾಸ್ತಿ ಇರಲಿದೆ. ಆಮೂಲಕ, ಮಳೆ ಸುರಿಯದೇ, ಉಷ್ಣಾಂಶ ಏರಿಕೆಯಾಗಿ, ಸಾವುನೋವು ಸಂಭವಿಸಲಿದೆ ಎಂದು ಉಲ್ಲೇಖವಾಗಿದೆ. ಕೋಡಿಶ್ರೀಗಳು ಸಮೃದ್ಧಿಯ ಮಳೆ ಎಂದರೆ, ವರದಿಯಲ್ಲಿ ಅನಾವೃಷ್ಟಿ ಎಂದು ಹೇಳಲಾಗಿದೆ.

## ನಿರ್ಧಾರಗಳಲ್ಲಿ ಭಿನ್ನಾಭಿಪ್ರಾಯವಿಲ್ಲ

**ಪೂರ್ಣ ಪ್ರಮಾಣದ ಸಭೆ ನಡೆಸಿದ ಚುನಾವಣೆ ಆಯೋಗದ ಸ್ಪಷ್ಟನೆ**

**ದೆಹಲಿ:** ಚುನಾವಣಾ ಆಯೋಗದ (EC) ಆಂತರಿಕ ನಿರ್ಧಾರಗಳಲ್ಲಿ ಭಿನ್ನಾಭಿಪ್ರಾಯಗಳಿವೆ ಎಂಬ ವರದಿಗಳನ್ನು ಭಾರತೀಯ ಚುನಾವಣಾ ಆಯೋಗ ಸಂಪೂರ್ಣವಾಗಿ ತಳ್ಳಿಹಾಕಿದೆ. ಶನಿವಾರ ಪೂರ್ಣ ಪ್ರಮಾಣದ ಸಭೆ ನಡೆಸಿದ ಆಯೋಗ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (SIR) ಸೇರಿದಂತೆ ಎಲ್ಲಾ ಪ್ರಮುಖ ನಿರ್ಧಾರಗಳನ್ನು ಸರ್ವಸಮ್ಮತಿಯಿಂದ ತೆಗೆದುಕೊಳ್ಳಲಾಗಿದೆ ಎಂದು ಸ್ಪಷ್ಟನೆ ನೀಡಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಚುನಾವಣಾ ಆಯುಕ್ತರಾದ ಸುಖ್‌ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಶನಿವಾರ ಮಧ್ಯಾಹ್ನ ಹೊಸದಿಲ್ಲಿಯ ನಿರ್ವಾಚನ ಸದನದಲ್ಲಿ ಸಭೆ ನಡೆಸಿದರು. ಆಯುಕ್ತರ ನಡುವೆಗಂಭೀರ ಭಿನ್ನಾಭಿಪ್ರಾಯಗಳಿವೆಯೆಂಬ ಮಾಧ್ಯಮ ವರದಿಗಳ ಬೆನ್ನಲ್ಲೇ ಈ ಸಭೆ ನಡೆದಿದ್ದು, ಮೂವರೂ ಒಟ್ಟಿಗೆ ಭಾಗವಹಿಸಿದ ಫೋಟೋವನ್ನು ಆಯೋಗ ಬಿಡುಗಡೆ ಮಾಡಿದೆ.

**ಆಯೋಗ ನೀಡಿದ ಪ್ರಮುಖ ಸ್ಪಷ್ಟನೆಗಳಿವು:** ಫಾರ್ಮ್ 6 ವಿವಾದ: ಮತದಾರರ ನೋಂದಣಿ ಫಾರ್ಮ್ 6 ರಲ್ಲಿನ ಪೋಷಕರ ಹೆಸರಿನ ಮ್ಯಾಪಿಂಗ್ ಕುರಿತು ಎದ್ದಿದ್ದ ಪ್ರಶ್ನೆಗೆ ಉತ್ತರಿಸಿದ ಆಯೋಗ, ಈ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. 'ಖಖಖ' ಅವಧಿಯನ್ನು ಹೊರತುಪಡಿಸಿ, ಸಾಮಾನ್ಯ ದಿನಗಳಲ್ಲಿ 1960 ರ ನಿಯಮಗಳ ಪ್ರಕಾರವೇ ಫಾರ್ಮ್‌ಗಳನ್ನು ಸ್ವೀಕರಿಸಲಾಗುತ್ತದೆ ಎಂದು ಹೇಳಿದೆ.

ಇಅಖಓಇಖ ಪೋರ್ಟಲ್ ಪರಾಮರ್ಶೆ: ತಂತ್ರಜ್ಞಾನ ವ್ಯವಸ್ಥೆ ಮತ್ತು ದತ್ತಾಂಶ ಲಭ್ಯತೆಯ ಮೇಲಿನ ಆತಂಕಗಳಿಗೆ ಸ್ಪಂದಿಸಿರುವ ಆಯೋಗ, ಐಐಟಿ ಅಥವಾ ಐಐಐಟಿ ಸ್ವತಂತ್ರ ತಜ್ಞರನ್ನು ಒಳಗೊಂಡ ಹಿರಿಯ ಉಪ ಚುನಾವಣಾ ಆಯುಕ್ತರ ಸಮಿತಿಯಿಂದ 'ECI-NET' ವ್ಯವಸ್ಥೆಯನ್ನು ಪರಾಮರ್ಶೆಗೆ ಒಳಪಡಿಸಲು ನಿರ್ಧರಿಸಿದೆ.

ಕ್ಯಾಬಿನೆಟ್ ಕಾರ್ಯದರ್ಶಿಗೆ ಪತ್ರದ ವಿಚಾರ: ಅಧಿಕಾರಿಯೊಬ್ಬರ ನಿಯೋಜನೆ ಮತ್ತು ಕೆಲಸದ ವಿಂಗಡಣೆಗೆ ಸಂಬಂಧಿಸಿದ ಪತ್ರವು ಯಾವುದೇ ನೀತಿ ನಿರೂಪಣೆಗೆ ಸಂಬಂಧಿಸಿದ್ದಲ್ಲ, ಬದಲಾಗಿ ಅಧಿಕಾರಿಯ ಕಾರ್ಯಾಚರಣೆಗೆ ಸಂಬಂಧಿಸಿದ್ದಾಗಿತ್ತು. ಆಯುಕ್ತರ ಸೂಚನೆಯಂತೆ ಆ ಆದೇಶವನ್ನು ಜಾರಿಗೆ ತಂದಿರಲಿಲ್ಲ ಎಂದು ಸ್ಪಷ್ಟಪಡಿಸಿದೆ.

ಖಖಖ ಆದೇಶಕ್ಕೆ ಸುಪ್ರೀಂ ಸಮ್ಮತಿ: ಜೂನ್ 24, 2025 ರಂದು ದೇಶಾದ್ಯಂತ 'ಖಖಖ' ಪ್ರಕ್ರಿಯೆಗೆ ಚಾಲನೆ ನೀಡಿದ ಆದೇಶವನ್ನು ಆಯೋಗದ ಎಲ್ಲಾ ಸದಸ್ಯರ ಸರ್ವಸಮ್ಮತಿಯಿಂದ ಹೊರಡಿಸಲಾಗಿತ್ತು. ಇದನ್ನು ಸುಪ್ರೀಂ ಕೋರ್ಟ್ ಕೂಡ ಎತ್ತಿಹಿಡಿದಿದೆ.

ಕಾರ್ಯವೈಖರಿ ಬಲವರ್ಧನೆಗೆ ಹೊಸ ಕ್ರಮ

ಇನ್ನು ಮುಂದೆ ಆಯೋಗದ ಪ್ರತಿಯೊಂದು ಸಭೆಯ ಕಾರ್ಯಸೂಚಿಯನ್ನು ಮುಂಚಿತವಾಗಿಯೇ ವಿತರಿಸಲಾಗುವುದು ಮತ್ತು ಸಭೆಯ ನಡಾವಳಿಗಳನ್ನು ಕಡ್ಡಾಯವಾಗಿ ದಾಖಲಿಸಲಾಗುವುದು. ಆಯುಕ್ತರು ನೀಡುವ ನಿರ್ದೇಶನಗಳನ್ನು ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಲಾಗಿದೆ.

## ಅನುಕಂಪ ಆಧಾರದ ನೇಮಕಾತಿ ನಿರಂತರ ಸೌಲಭ್ಯ ಪಡೆಯುವ ಹಕ್ಕಲ್ಲ

**ಬೆಂಗಳೂರು:** ಅನುಕಂಪ ಆಧಾರದ ಮೇಲೆ ನೀಡಲಾಗುವ ಸರಕಾರಿ ನೇಮಕಾತಿಗಳು ಕುಟುಂಬಕ್ಕೆ ಒದಗುವ ತಕ್ಷಣದ ಆರ್ಥಿಕ ಸಂಕಷ್ಟ ನಿವಾರಣೆಯ ಒಮ್ಮೆ ನೀಡುವ ಪರಿಹಾರವಾಗಿದೆಯೇ ಹೊರತು ಅದು ನಿರಂತರ ಸೌಲಭ್ಯ ಪಡೆಯುವ ಹಕ್ಕಾಗುವುದಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ. ಅಲ್ಲದೆ, ಅನುಕಂಪ ಆಧಾರದಲ್ಲಿ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ನೇಮಕಗೊಂಡಿದ್ದ ಇಬ್ಬರು ನೌಕರರಿಗೆ ಉನ್ನತ ಶೈಕ್ಷಣಿಕ ಅರ್ಹತೆ ಇದೆ ಎಂಬ ಕಾರಣಕ್ಕೆ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಪರಿಗಣಿಸುವಂತೆ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ನೀಡಿದ್ದ ಆದೇಶವನ್ನು ನ್ಯಾಯಾಲಯ ರದ್ದುಗೊಳಿಸಿದೆ.

ಕೆಎಟಿ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಹಾಗೂ ನ್ಯಾಯಮೂರ್ತಿ ಹೇಮಾ



ಕುಲಕರ್ಣಿ ಅವರಿದ್ದ ವಿಭಾಗೀಯ ಪೀಠವು ಈ ಆದೇಶ ನೀಡಿದೆ. "ಒಮ್ಮೆ ಅನುಕಂಪದ ಆಧಾರದ ಹುದ್ದೆ ಸ್ವೀಕರಿಸಿದ ಮೇಲೆ, ಕೇವಲ ಹೆಚ್ಚಿನ ಶೈಕ್ಷಣಿಕ ಅರ್ಹತೆ ಇದೆ ಎಂಬ ಕಾರಣಕ್ಕೆ ಉನ್ನತ ಹುದ್ದೆ ಕೋರಲು ಕಾನೂನಾತ್ಮಕ ಹಕ್ಕಿರುವುದಿಲ್ಲ. ವಿದ್ಯಾರ್ಹತೆಯು ಹುದ್ದೆಗೆ ಅರ್ಹತೆ ನೀಡಬಹುದೇ ಹೊರತು ಅನುಕಂಪದ ಯೋಜನೆಯಡಿ ಆ ಹುದ್ದೆಯನ್ನೆ ಪಡೆಯುವ ಹಕ್ಕನ್ನು ಸೃಷ್ಟಿಸುವುದಿಲ್ಲ," ಎಂದು ನ್ಯಾಯಾಲಯ ಆದೇಶಿಸಿದೆ.

"2018ರಲ್ಲಿ ಎಸ್‌ಡಿಎ ಹುದ್ದೆ ಸ್ವೀಕರಿಸಿದ ನೌಕರರು 6 ವರ್ಷಗಳ ಬಳಿಕ ನ್ಯಾಯಮಂಡಳಿ ಮೆಟ್ಟಿಲೇರಿದ್ದಾರೆ. ಆಡಳಿತಾತ್ಮಕ ನ್ಯಾಯಮಂಡಳಿಗಳ ಕಾಯಿದೆಯ ಸೆಕ್ಷನ್ 21ರಡಿ ನಿಗದಿತ ಕಾಲಮಿತಿ ಮೀರಿ ಸಲ್ಲಿಸುವ ಅರ್ಜಿಗಳಿಗೆ ಸಮರ್ಪಕ ಕಾರಣವಿಲ್ಲದೆ ಪರಿಹಾರ ನೀಡಲಾಗದು," ಎಂದು ನ್ಯಾಯಪೀಠ ಹೇಳಿದೆ.

"ಈ ಹಿಂದೆ ಬೇರೆಯವರಿಗೆ ಶೈಕ್ಷಣಿಕ ಅರ್ಹತೆಯ ಆಧಾರದಲ್ಲಿ ಹುದ್ದೆ ಬದಲಾಯಿಸಿಕೊಡಲಾಗಿದೆ ಎಂಬ ಕಾರಣಕ್ಕೆ ಪ್ರಸ್ತುತ ಅರ್ಜಿದಾರರಿಗೂ ಅದನ್ನು ಅನ್ವಯಿಸಲು ಸಾಧ್ಯವಿಲ್ಲ. ನಿಯಮಬಾಹಿರವಾಗಿ ನೀಡಿದ ಪ್ರಯೋಜನಗಳು ಮತ್ತೊಂದು ಕಾನೂನುಬಾಹಿರ ಕ್ರಮಕ್ಕೆ ಹಕ್ಕು ಸೃಷ್ಟಿಸುವುದಿಲ್ಲ. ಅನುಕಂಪದ ನೇಮಕಾತಿಯಲ್ಲಿ ಸರಕಾರವು ಯೋಜನೆಯ ನಿಯಮಗಳನ್ನು ಏಕರೂಪವಾಗಿ ಪಾಲಿಸಬೇಕು. ನಿಯಮ ಮೀರಿ ಕೆಲವರಿಗೆ ಸೌಲಭ್ಯ ನೀಡುವುದರಿಂದ ಅಸಮಾನತೆ ಹಾಗೂ ಅನಗತ್ಯ ನ್ಯಾಯಾಂಗ ವ್ಯಾಜ್ಯಗಳು ಸೃಷ್ಟಿಯಾಗಿ, ಸಂವಿಧಾನದ ವಿಧಿ 14ರ (ಸಮಾನತೆಯ ಹಕ್ಕು) ಉಲ್ಲಂಘನೆಯಾಗುತ್ತದೆ," ಎಂದು ನ್ಯಾಯಪೀಠ ಎಚ್ಚರಿಕೆ ನೀಡಿದೆ.

### ಏನಿದು ಅನುಕಂಪದ ಉದ್ಯೋಗ ?

ಕರ್ನಾಟಕ ಸರ್ಕಾರಿ ಸೇವೆಯಲ್ಲಿರುವ ನೌಕರರು ಸೇವಾ ಅವಧಿಯಲ್ಲಿ ಅಕಾಲಿಕ ಮರಣ ಹೊಂದಿದರೆ ಅಥವಾ ಗಂಭೀರ ಅನಾರೋಗ್ಯದ ಕಾರಣಕ್ಕೆ ವೈದ್ಯಕೀಯ ಮಂಡಳಿಯಿಂದ ಅಸಮರ್ಥರೆಂದು ದೃಢಪಟ್ಟು ನಿವೃತ್ತಿಗೊಂಡರೆ, ಅವರ ಕುಟುಂಬಕ್ಕೆ ಆರ್ಥಿಕ ಆಸರೆ ನೀಡಲು ಅನುಕಂಪದ ಆಧಾರದ ನೇಮಕಾತಿ ಕಲ್ಪಿಸಲಾಗುತ್ತದೆ. ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳ ಪ್ರಕಾರ, ಮೃತ/ಅಸಮರ್ಥ ನೌಕರನ ಪತಿ, ಪತ್ನಿ, ಮಗ ಅಥವಾ ಮಗಳಿಗೆ ಗ್ರೂಪ್ 'ಸಿ' ಅಥವಾ ಗ್ರೂಪ್ 'ಡಿ' ಹುದ್ದೆಗಳಿಗೆ ಅರ್ಹತೆಯ ಆಧಾರದ ಮೇಲೆ ಆದ್ಯತೆ ನೀಡಲಾಗುತ್ತದೆ. ನೌಕರ ಮರಣ ಹೊಂದಿದ 1 ವರ್ಷದ ಒಳಗೆ ನಿಯಮಾನುಸಾರ ಅರ್ಜಿ ಸಲ್ಲಿಸುವುದು ಕಡ್ಡಾಯ. ಕುಟುಂಬದಲ್ಲಿ ಬೇರೆ ಯಾರೂ ಸರ್ಕಾರಿ ಸೇವೆಯಲ್ಲಿ ಇರಬಾರದು ಮತ್ತು ಕುಟುಂಬದ ವಾರ್ಷಿಕ ಆದಾಯ ನಿಯಮಿತ ಮಿತಿಯೊಳಗಿರಬೇಕು. ಕುಟುಂಬವು ಆರ್ಥಿಕ ಸಂಕಷ್ಟದಲ್ಲಿರುವುದನ್ನು ದೃಢೀಕರಿಸಿದ ಬಳಿಕವೇ ಈ ಸೌಲಭ್ಯ ದೊರೆಯುತ್ತದೆ.

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

# ಅಕ್ರಮ ಮಣ್ಣು, ಮರಳು ದಂಧೆ ನಿಯಂತ್ರಣಕ್ಕೆ ವಿಫಲ ಆರೋಪ

## ಗಣಿ, ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ವಿರುದ್ಧ ತಮಟೆ ಚಳುವಳಿ ಎಚ್ಚರಿಕೆ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**



ಜಿಲ್ಲೆಯಲ್ಲಿ ಮನಡೆಯುತ್ತಿರುವ ಅಕ್ರಮ ಮಣ್ಣು ಹಾಗೂ ಮರಳು ದಂಧೆಗೆ ಕಡಿವಾಣ ಹಾಕುವಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ವಿಫಲವಾಗಿದೆ ಎಂದು ಆರೋಪಿಸಿ, ಇಲಾಖೆಯ ಅಧಿಕಾರಿಗಳ ವಿರುದ್ಧ ತಮಟೆ ಚಳುವಳಿ ನಡೆಸುವುದಾಗಿ ರೈತ ಮುಖಂಡ ರವೀಂದ್ರಗೌಡ ಪಾಟೀಲ ಎಚ್ಚರಿಕೆ ನೀಡಿದ್ದಾರೆ.
ಈ ಕುರಿತು ಸರ್ಕಾರ ಹಾಗೂ ಹಾವೇರಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ, ಇತ್ತೀಚೆಗೆ ಜಿಲ್ಲೆಗೆ ವರ್ಗಾವಣೆಯಾಗಿ ಬಂದಿರುವ ಹಿರಿಯ ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿ ಟಿ.ವಿ. ಪುಷ್ಪಾ ಹಾಗೂ ಭೂವಿಜ್ಞಾನಿಗಳಾದ ಮಲ್ಲಯ್ಯ, ಧನರಾಜ್ ಮತ್ತು ಅಶ್ವಿನಿ ಅವರ ಕಾರ್ಯವೈಖರಿ ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದಾರೆ.
ತುಂಗಭದ್ರಾ ನದಿಪಾತ್ರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಅಕ್ರಮ ಮಣ್ಣು, ಮರಳು ಸಾಗಾಟ ನಡೆಯುತ್ತಿದ್ದರೂ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಇಟ್ಟಿಗೆ ಭಟ್ಟಿಗಳಿಗೆ ಮಣ್ಣು ತೆಗೆಯುವ ನೆಪದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಜೀವನೋಪಾಯಕ್ಕಾಗಿ ನೀಡಿರುವ ಜಮೀನುಗಳಲ್ಲಿಯೂ ಮಣ್ಣು ಲೂಟಿ ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ.
ಇದೇ ವೇಳೆ, ಎಂ–ಸ್ಯಾಂಡ್ ಹೆಸರಿನಲ್ಲಿ ನದಿ ಪಾತ್ರದ ಮರಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ. ರಾತ್ರಿವೇಳೆ ಮಣ್ಣು ಮತ್ತು ಮರಳು ತುಂಬಿದ ಲಾರಿಗಳ ಸಂಚಾರದಿಂದ ಗ್ರಾಮಸ್ಥರು ತೊಂದರೆ ಅನುಭವಿಸುತ್ತಿದ್ದು, ಇತ್ತೀಚೆಗೆ ಹನುಮನಹಳ್ಳಿ ಬಳಿ ಸಾರ್ವಜನಿಕರು ಲಾರಿಗಳನ್ನು ತಡೆದು ಆಕ್ರೋಶ ವ್ಯಕ್ತಪಡಿಸಿರುವುದಾಗಿ ತಿಳಿಸಿದ್ದಾರೆ.
ಹಿಂದೆ ಕರ್ತವ್ಯ ನಿರ್ವಹಿಸಿದ್ದ ಹಿರಿಯ ಅಧಿಕಾರಿ ನವೀನ್ ಹಾಗೂ ಭೂವಿಜ್ಞಾನಿಗಳಾದ ಕುಮಾರ್, ಶಬ್ಬೀರ್ ಅವರ ಅವಧಿಯಲ್ಲಿ ಅಕ್ರಮ ಗಣಿಗಾರಿಕೆ ವಿರುದ್ಧ ಕ್ರಮ ಕೈಗೊಳ್ಳಲಾಗಿತ್ತು. ಕಲ್ಲು ಕ್ವಾರಿ ಹಾಗೂ ಕ್ರಷರ್‌ಗಳ ನಿಯಮ ಉಲ್ಲಂಘನೆಗೆ ಕೋಟ್ಯಂತರ ರೂಪಾಯಿ ದಂಡ ವಿಧಿಸಿರುವುದು ಇಲಾಖೆಯ ಹಿಂದಿನ ಕಾರ್ಯಾಚರಣೆಯ ಫಲ ಎಂದು ರವೀಂದ್ರಗೌಡ ಹೇಳಿದ್ದಾರೆ.
ಪ್ರಸ್ತುತ ಅಧಿಕಾರಿಗಳನ್ನು ಸರ್ಕಾರ ಕೂಡಲೇ ವಾಪಸ್ ಕರೆಸಿಕೊಳ್ಳಬೇಕು. ಅವರ ಎರಡೂವರೆ ತಿಂಗಳ ಕಾರ್ಯವೈಖರಿ ಕುರಿತು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಇಲ್ಲವಾದರೆ ಪರಿಸರವಾದಿಗಳು, ಪ್ರಜ್ಞಾವಂತರು ಹಾಗೂ ರೈತ ಸಂಘಟನೆಗಳೊಂದಿಗೆ ತಮಟೆ ಚಳುವಳಿ ನಡೆಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

# ದೊಡ್ಡಪ್ಪನನ್ನೇ ಮಚ್ಚಿನಿಂದ ಕೊಂದವನಿಗೆ ಜೀವಾವಧಿ ಶಿಕ್ಷೆ

## ಜಮೀನು ಪಾಲು ಹಂಚಿಕೆ ವಿಚಾರದಲ್ಲಿ ಜಗಳ, ಕೊಲೆಯಲ್ಲಿ ಅಂತ್ಯವಾಗಿದ್ದ ಪ್ರಕರಣ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**
ಜಮೀನಿನಲ್ಲಿ ಪಾಲು ನೀಡುವಂತೆ ಕೇಳಿದ್ದಕ್ಕೆ ದೊಡ್ಡಪ್ಪನೊಂದಿಗೆ ಜಗಳ ತೆಗೆದು, ಮಚ್ಚಿನಿಂದ ಮುಖಕ್ಕೆ ಹೊಡೆದು ಕೊಲೆ ಮಾಡಿದ ಅಪರಾಧಿಗೆ ಇಲ್ಲಿಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ಶನಿವಾರ ಆದೇಶಿಸಿದೆ.
ತಾಲೂಕಿನ ಕಜ್ಜರಿ ಗ್ರಾಮದ ಹನುಮಂತಪ್ಪ ಕರಿಯಪ್ಪ ಬೇಲೂರ (34) ಶಿಕ್ಷೆಗೆ ಗುರಿಯಾದ ಅಪರಾಧಿ.
ಈತ ತನ್ನ ದೊಡ್ಡಪ್ಪ ಮೃತರು ಅದೇ ನಾಗಪ್ಪ ಫಕೀರಪ್ಪ ಬೇಲೂರ ಎಂಬುವರನ್ನು ಕೊಲೆ ಮಾಡಿದ್ದ.
ಘಟನೆ ವಿವರ: 2020ರ ಮೇ 5ರಂದು ನಾಗಪ್ಪ ಬೇಲೂರ ತಮ್ಮ ಮಕ್ಕಳೊಂದಿಗೆ ಜಮೀನಿನಲ್ಲಿ ಕ್ಯಾಬೇಜ್ ಕಟಾವು ಮಾಡುತ್ತಿದ್ದರು. ಈ ವೇಳೆ ಅಲ್ಲಿಗೆ ಬಂದಿದ್ದ ಹನುಮಂತಪ್ಪ, ಜಮೀನಿನಲ್ಲಿ ತಮಗೆ ಪಾಲು ನೀಡುವಂತೆ ಕೇಳಿದ್ದನು. ಆಗ ನಾಗಪ್ಪ ಅವರು, 'ಈಗ ಕೆಲಸ ಮಾಡು, ಮುಂದೆ ನೋಡೋಣ' ಎಂದು ಹೇಳಿದ್ದರಿಂದ ಕೋಪಗೊಂಡ ಹನುಮಂತಪ್ಪ, ಕ್ಯಾಬೇಜ್ ಕಟಾವು ಮಾಡುತ್ತಿದ್ದ ಮಚ್ಚಿನಿಂದ ನಾಗಪ್ಪನ ಮುಖ ಹಾಗೂ ಮೂಗಿನ ಭಾಗಕ್ಕೆ ಬಲವಾಗಿ ಹೊಡೆದು ಕೊಲೆ ಮಾಡಿದ್ದ.
ಈ ಕುರಿತು ರಾಣೆಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.
ಪ್ರಕರಣದ ತನಿಖೆ ನಡೆಸಿದ ಸಿಪಿಐ ಸುರೇಶ ಸಗರಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸಾಕ್ಷ್ಯಾಧಾರಗಳ ಸಮೇತ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಈ. ಎಸ್. ಈರಣ್ಣ ಅಪರಾಧಿಗೆ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ.
ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಮುರಿಗೇಶ ಅಂಕದ ವಾದ ಮಂಡಿಸಿದ್ದರು.

# ಹರಿಹರ ನಗರಕ್ಕೆ ಸಿಟಿ ಬಸ್ ಸೌಲಭ್ಯ ಕಲ್ಪಿಸಲು ಕರವೇ ಒತ್ತಾಯ

**ಹರಿಹರ:** ಜನಸಂಖ್ಯೆ ಹೆಚ್ಚಾಗಿರುವ ಹರಿಹರ ನಗರದಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಿಟಿ ಬಸ್ ಸೇವೆಯನ್ನು ಶೀಘ್ರ ಆರಂಭಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣಶೆಟ್ಟಿ ಬಣ) ಕೆಎಸ್‌ಆರ್‌ಟಿಸಿ ಘಟಕ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.
ದಾವಣಗೆರೆ ಜಿಲ್ಲೆಯಲ್ಲಿಯೇ ಎರಡನೇ ಅತಿ ದೊಡ್ಡ ನಗರವಾಗಿರುವ ಹರಿಹರದಲ್ಲಿ ಸುಮಾರು 1.5 ಲಕ್ಷ ಜನಸಂಖ್ಯೆಯಿದ್ದು, ನಗರ ವ್ಯಾಪ್ತಿ ವಿಸ್ತರಣೆಯಾಗಿದೆ. ಗುತ್ತೂರು, ಗುತ್ತೂರು ಕಾಲೋನಿ, ಚಿಂತಾಮಣಿ ನಗರ, ಹಳೆ ಹರ್ಲಾಪುರ, ಮಾಚೇನಹಳ್ಳಿ, ಅಮರಾವತಿ, ಅಮರಾವತಿ ಕಾಲೋನಿ, ಕೆಎಚ್‌ಬಿ ಕಾಲೋನಿ, ಹರಿಹರೇಶ್ವರ ಬಡಾವಣೆ, ಹನಗವಾಡಿ, ವಿದ್ಯಾನಗರ ಸೇರಿದಂತೆ ಹಲವು ಪ್ರದೇಶಗಳು ನಗರಸಭೆ ವ್ಯಾಪ್ತಿಗೆ ಸೇರ್ಪಡೆಯಾಗಿವೆ. ಆದರೆ ಈ ಭಾಗಗಳಿಗೆ ಸಮರ್ಪಕ ನಗರ ಸಾರಿಗೆ ವ್ಯವಸ್ಥೆ ಇಲ್ಲದಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಕರವೇ ತಿಳಿಸಿದೆ.
ನಗರದಲ್ಲಿ 6 ಪ್ರಥಮ ದರ್ಜೆ ಕಾಲೇಜು, 7 ಪದವಿ ಪೂರ್ವ ಕಾಲೇಜು, 2 ಪಾಲಿಟೆಕ್ನಿಕ್ ಕಾಲೇಜು, 3 ಐಟಿಐ, ಜಿಟಿಟಿಸಿ ಹಾಗೂ 16 ಪ್ರೌಢಶಾಲೆಗಳಿದ್ದು, ಸುಮಾರು 15 ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನಗರದ ಗುತ್ತೂರು ಹೆಲಿಪ್ಯಾಡ್ ಪ್ರದೇಶದಲ್ಲಿರುವ 8 ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ನೂರಾರು ವಿದ್ಯಾರ್ಥಿಗಳು ವಾಸಿಸುತ್ತಿದ್ದು, ಕಾಲೇಜುಗಳಿಗೆ ತೆರಳಲು ಸುಮಾರು 8 ಕಿ.ಮೀ. ದೂರ ನಡೆದು ಹೋಗಬೇಕಾದ ಪರಿಸ್ಥಿತಿ ಇದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.
ಸಾರಿಗೆ ವ್ಯವಸ್ಥೆಯ ಕೊರತೆಯಿಂದ ಕೆಲ ವಿದ್ಯಾರ್ಥಿಗಳು ವಾಹನ ಸವಾರರನ್ನು ಅವಲಂಬಿಸಬೇಕಾಗಿದ್ದು, ಅನಿವಾರ್ಯ ಸಂದರ್ಭಗಳಲ್ಲಿ ಲಾರಿ, ಟ್ರ್ಯಾಕ್ಟರ್‌ಗಳಲ್ಲಿಯೂ ಪ್ರಯಾಣಿಸುವಂತಾಗಿದೆ. ಪರೀಕ್ಷಾ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಕಾಲೇಜು ತಲುಪಲು ಸಾಧ್ಯವಾಗದೆ ವಿದ್ಯಾರ್ಥಿಗಳು ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಕರವೇ ಆರೋಪಿಸಿದೆ.
ಅದೇ ರೀತಿ ಸಾರ್ವಜನಿಕ ಆಸ್ಪತ್ರೆಗೆ ಪ್ರತಿನಿತ್ಯ 700ರಿಂದ 800 ಹೊರರೋಗಿಗಳು ಚಿಕಿತ್ಸೆಗಾಗಿ ಆಗಮಿಸುತ್ತಿದ್ದು, ನಗರ ಹಾಗೂ ಗ್ರಾಮೀಣ ಭಾಗದ ರೋಗಿಗಳಿಗೆ ಸಿಟಿ ಬಸ್ ಸೇವೆಯಿಂದ ಹೆಚ್ಚಿನ ಅನುಕೂಲವಾಗಲಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.
ಹೀಗಾಗಿ ಹರಿಹರ ನಗರದಲ್ಲಿ ವಿವಿಧ ಬಡಾವಣೆಗಳನ್ನು ಸಂಪರ್ಕಿಸುವಂತೆ ಸಿಟಿ ಬಸ್ ಸಂಚಾರವನ್ನು ಆದಷ್ಟು ಶೀಘ್ರ ಆರಂಭಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸಾರ್ವಜನಿಕರನ್ನು ಸಂಘಟಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣಶೆಟ್ಟಿ ಬಣ) ಎಚ್ಚರಿಕೆ ನೀಡಿದೆ. ಈ ಸಂದರ್ಭದಲ್ಲಿ ಹರಿಹರ ತಾಲೂಕ್ ಅಧ್ಯಕ್ಷರಾದ ರಮೇಶ್ ಮಾನೆ. ನಗರ ಘಟಕದ ಅಧ್ಯಕ್ಷರಾದ ಪ್ರೀತಮ್ ಬಾಬು. ಪದಾಧಿಕಾರಿಗಳು ಶೇಕ್ ಫಜಲ್. ಆಲಿ ಅಕ್ಬರ್. ಮೊಹಮ್ಮದ್ ರಾಖಿಫ್. ಮಂಜುನಾಥ್. ರುದ್ರೇಶ್. ಜಯಣ್ಣ. ರಂಗಣ್ಣ. ಗಜ (ರಾಯ್ ).ಗಣೇಶ್.ಶಿವಕುಮಾರ್ ಇದ್ದರು.




# ಸವಣೂರನ್ನು ಪ್ರತ್ಯೇಕ ವಿಧಾನ ಸಭಾ ಕ್ಷೇತ್ರ ಮಾಡಿ

## ದೊಡ್ಡ ಹುಣಸೇ ಕಲ್ಮಠದ ಶ್ರೀ ಮ.ನಿ.ಪ್ರ ಚನ್ನಬಸವ ಮಹಾಸ್ವಾಮೀಜಿ ಒತ್ತಾಯ



**ಸವಣೂರ:** ಸೆ,28 ರಂದು ಸವಣೂರು ತಾಲ್ಲೂಕು ಪ್ರತ್ಯೇಕ ವಿಧಾನ ಸಭಾ ಕ್ಷೇತ್ರ ಹೋರಾಟ ಸಮಿತಿ ವತಿಯಿಂದ ಸವಣೂರು ತಾಲ್ಲೂಕು ಪ್ರತ್ಯೇಕ ವಿಧಾನ ಸಭಾ ಕ್ಷೇತ್ರ ಮಾಡುವಂತೆ ಒತ್ತಾಯಿಸಿ ಪಟ್ಟಣದ ಉಪವಿಭಾಗಾಧಿಕಾರಿಗಳ ಮೂಲಕವಾಗಿ ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸುವ ಹೋರಾಟ ಹಮ್ಮಿಕೊಳ್ಳಲಾಗಿದೆ. ಈ ಹೋರಾಟಕ್ಕೆ ಸವಣೂರ ತಾಲ್ಲೂಕಿನ ಪಟ್ಟಣ ಹಾಗೂ ಎಲ್ಲಾ ಗ್ರಾಮಗಳ ಗ್ರಾಮಸ್ಥರು ಪಾಲ್ಗೊಳ್ಳಬೇಕೆಂದು ಸವಣೂರು ತಾಲ್ಲೂಕು ಪ್ರತ್ಯೇಕ ವಿಧಾನ ಸಭಾ ಕ್ಷೇತ್ರ ಹೋರಾಟ ಸಮಿತಿಯ ಗೌರವಾಧ್ಯಕ್ಷರು ಹಾಗೂ ಪಟ್ಟಣದ ದೊಡ್ಡ ಹುಣಸೇ ಕಲ್ಮಠದ ಶ್ರೀಗಳಾದ ಶ್ರೀ ಮ.ನಿ.ಪ್ರ ಚನ್ನಬಸವ ಮಹಾಸ್ವಾಮಿಗಳು ತಿಳಿಸಿದ್ದಾರೆ.
ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು ದಿ,28 ರಂದು ಪಟ್ಟಣದ ದೊಡ್ಡ ಹುಣಸೇ ಕಲ್ಮಠದಲ್ಲಿ 10 ಘಂಟೆಗೆ ತಾಲ್ಲೂಕಿನ ಎಲ್ಲಾ ನಾಗರಿಕರ ನೇತೃತ್ವದಲ್ಲಿ ಮೆರವಣಿಗೆ ಪ್ರಾರಂಭವಾಗಿ ಸವಣೂರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮಾನ್ಯ ಉಪವಿಭಾಗಾಧಿಕಾರಿಗಳಿಗೆ ಸವಣೂರು ತಾಲ್ಲೂಕು ಪ್ರತ್ಯೇಕ ವಿಧಾನ ಸಭಾ ಕ್ಷೇತ್ರದ ಹಕ್ಕೊತ್ತಾಯ ಮನವಿಯನ್ನು ಸಲ್ಲಿಸಲಾಗುವುದು. ಪಕ್ಷಾತೀತ ಹಾಗೂ ಜಾತ್ಯಾತೀತವಾಗಿರುವ ಹೋರಾಟ ಮನವಿ ಸಲ್ಲಿಸುವ ಕಾರ್ಯದಲ್ಲಿ ಎಲ್ಲ ಧರ್ಮ ಗುರುಗಳು,ಎಲ್ಲ ಗುರು–ಹಿರಿಯರು, ರಾಜಕೀಯ ಮುಖಂಡರು ಸಂಘಟಕರು ಆಗಮಿಸಲಿದ್ದು, ಸವಣೂರ ತಾಲ್ಲೂಕಿನ ಎಲ್ಲಾ ಮಹಾಜನತೆ ಹೆಚ್ಚಿನ ಪ್ರಮಾಣದಲ್ಲಿ ಪಾಲ್ಗೊಳ್ಳಬೇಕೆಂದು ಹೋರಾಟ ಸಮಿತಿಯ ಗೌರವಾಧ್ಯಕ್ಷರಾದ ಶ್ರೀ ಮ.ನಿ.ಪ್ರ ಚನ್ನ ಬಸವ ಮಹಾಸ್ವಾಮಿಗಳು, ಅಧ್ಯಕ್ಷರಾದ ಎಸ್ ವ್ಹಿ ಪಾಟೀಲ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ನಿರ್ಗತಿಕರಿಗೆ ಆಶ್ರಯ ನೀಡುವ ಪುಣ್ಯಾಶ್ರಮ

## ಗದಗಿನ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಕಲ್ಲಯ್ಯಜ್ಜನವರ ಆಶೀರ್ವಚನ

**ಗಂಗಾವತಿ:** ಅಂಧರು, ಅಂಗವಿಕಲರು, ಅನಾಥರು ಹಾಗೂ ನಿರ್ಗತಿಕರಿಗೆ ಆಶ್ರಯ ನೀಡಿ ಸ್ವಾವಲಂಭಿಗಳನ್ನಾಗಿ ರೂಪಿಸುವ ಪುಣ್ಯ ಕಾರ್ಯವನ್ನು ಪುಣ್ಯಾಶ್ರಮ ಮಾಡುತ್ತಿದೆ ಎಂದು ಗದಗಿನ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಕಲ್ಲಯ್ಯಜ್ಜ ಹೇಳಿದರು.
ವಿಪ್ರ ನಗರದ ವೀರೇಶ್ವರ ಪುಣ್ಯಾಶ್ರಮದ ಶಾಖಾ ಮಠದಲ್ಲಿ ಮಂಗಳವಾರ ತ್ರಿಭಾಷಾ ಕವಿ ಡಾ.ಪಂಡಿತ ಪುಟ್ಟರಾಜ್ ಗವಾಯಿಗಳ ಪುಣ್ಯಸ್ಮರಣೆ ಮತ್ತು ಸ್ವರ ಸಂಗೀತ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಲಾವಿದ ಖಾಸೀಂ ಅಲಿ ಮುದ್ದಾಬಳ್ಳಿ ಮಾತನಾಡಿ, ಸರಳತೆ, ಮಾನವೀಯತೆ ಹಾಗೂ ಶಿಷ್ಯರ ಮೇಲಿನ ಅಪಾರ ಪ್ರೀತಿ ಪುಟ್ಟರಾಜ ಗವಾಯಿಗಳಲಿದ್ದು, ಶಾಖಾಮಠದ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.



ಸ್ವರ ಸಂಗೀತ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಕಲಾವಿದರಾದ ವೆಂಕಟೇಶ ದಾಸನಾಳ್, ಸುಧಾರಾಣಿ, ಸದಾನಂದ ಶೇಟ್, ಜುಜ್ಜುವರಪು ನಾಗೇಶ್ವರರಾವ್, ದೊಡ್ಡಯ್ಯ ಕಲ್ಲೂರು, ಶಂಕ್ರಪ್ಪ ಬಿನ್ನಾಳ್, ಸಣ್ಣಪ್ಪ ಕಮ್ಮಾರ್, ಕನಕಪ್ಪ ಚಿತ್ರಗಾರ, ಶರಣಬಸವನಗೌಡರಿಂದ ಭಕ್ತಿಗೀತೆ, ದಾಸವಾಣಿ ಸೇರಿ ಕಲಾ ಗಾಯನ ನಡೆಯಿತು. ಪ್ರಮುಖರಾದ ಕನಕಪ್ಪ ಚಿತ್ರಗಾರ, ಹೇಮಣ್ಣ ಸಂಗಾಪುರ, ಕೀರೇಶ್ವರ ಸ್ವಾಮಿ, ಪುರುಷೋತ್ತಮ ರೆಡ್ಡಿ, ಮಲ್ಲಿಕಾರ್ಜುನ ಗೌಡ ಇತರರಿದ್ದರು.

# ಮಳೆ, ಕಪಿಲತೀರ್ಥ ಜಲಪಾತಕ್ಕೆ ಜೀವಕಳೆ

**ಹನುಮಸಾಗರ:** ಪಟ್ಟಣ ಸೇರಿ ಸುತ್ತಲಿನ ಗ್ರಾಮಗಳಲ್ಲಿ ಕಳೆದ ಎರಡ್ಮೂರು ದಿನಗಳಿಂದ ಸುರಿದ ಮಳೆಗೆ ಸಮೀಪದ ಕಪಿಲತೀರ್ಥ ಜಲಪಾತಕ್ಕೆ ಜೀವ ಕಳೆ ಬಂದಿದ್ದು, ಮೈದುಂಬಿ ಹರಿದು ಪ್ರವಾಸಿಗರನ್ನು ಆಕರ್ಷಿಸುತ್ತಿದೆ.
ಕಲ್ಯಾಣ ಕರ್ನಾಟಕದ ಏಕೈಕ ಜಲಪಾತವಾದ ಕಬ್ಬರಗಿ ಗ್ರಾಮದ ಕಪಿಲತೀರ್ಥ ಜಲಪಾತ ಮಿನಿಜೋಗವೆಂದು ಹೆಸರು ಪಡೆದಿದೆ. ಬೇಸಿಗೆಯಲ್ಲಿ ನೀರಿಲ್ಲದೆ ಬತ್ತಿ ಹೋಗಿದ್ದ ಜಲಪಾತದಲ್ಲಿ ಸದ್ಯ ನೀರು ಧುಮ್ಮಿಕ್ಕುತ್ತಿದೆ.
ಬೆಟ್ಟದ ತಪ್ಪಲಿನಲ್ಲಿ 25 ಅಡಿ ಎತ್ತರದಿಂದ ಬೀಳುವ ನೀರಿನ ಕೆಳಗೆ ನಿಂತು ಸ್ನಾನ ಮಾಡಿ, ಮಜಾ ಪಡೆಯಲು ಕೊಪ್ಪಳ ಸೇರಿ ಸುತ್ತಲಿನ ಜಿಲ್ಲೆಗಳಿಂದ ಪ್ರವಾಸಿಗರು ಬರುತ್ತಿದ್ದಾರೆ.
ನೀರು ಬೀಳುವ ಅಡಿಯಲ್ಲಿ ನಿಸರ್ಗವೇ ಹಾಸು ಬಂಡೆಯನ್ನು ನಿರ್ಮಿಸಿರುವುದರಿಂದ ಬಂಡೆಗೆ ಅಪ್ಪಳಿಸಿದ ನೀರು ಪಕ್ಕದಲ್ಲಿ ನಿಂತ ಜನರಿಗೆ ಚಿಮ್ಮಿ ಹಿತಾನುಭವ ನೀಡುತ್ತಿದೆ.
ಭೋರ್ಗರೆದು ಬೀಳುವ ನೀರು ನೋಡುಗರ ಕಣ್ಮನ ತಣಿಸುತ್ತಿದೆ. ಧುಮ್ಮಿಕ್ಕುತ್ತಿರುವ ಜಲಪಾತ ವೀಕ್ಷಿಸಲು, ನೀರಿಗೆ ಮೈಯೊಡ್ಡಲು ಪ್ರವಾಸಿಗರು ತಂಡೋಪತಂಡವಾಗಿ ಆಗಮಿಸುತ್ತಿದ್ದಾರೆ.



# ಕೆಎಎಸ್ ಅಭ್ಯರ್ಥಿ ಮಮಿತಾ ಜಾಮೀನು ಅರ್ಜಿ ವಜಾ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ)ದಲ್ಲಿ ನಡೆದಿರುವ ಪರೀಕ್ಷಾ ಹಗರಣದ ಕುರಿತು ಕೆಎಎಸ್ ಅಭ್ಯರ್ಥಿ ಮಮಿತಾ ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನಗರದ 52ನೇ ಸೇಷನ್ಸ್ ಕೋರ್ಟ್ ವಜಾಗೊಳಿಸಿ ಗುರುವಾರ ಆದೇಶ ಹೊರಡಿಸಿದೆ.
ಕೆಪಿಎಸ್‌ಸಿ ಸದಸ್ಯೆ ಶಾಂತಾ ಹೊಸಮನಿ ಅವರೊಂದಿಗೆ ನೇಮಕಾತಿ ವಿಚಾರವಾಗಿ ಹಣ ನೀಡಿದ್ದಾರೆ ಎಂಬ ಆರೋಪದ ಮೇರೆಗೆ ದಾಖಲಾಗಿದ್ದ ಪ್ರಕರಣದಲ್ಲಿ ಮಮಿತಾ ಜಾಮೀನು ಅರ್ಜಿ ಸಲ್ಲಿಸಿದರು. ಅರ್ಜಿ ವಿಚಾರಣೆ ನಡೆಸಿದ ಕೋರ್ಟ್ ವಾದ–ಪ್ರತಿವಾದ ಆಲಿಸಿ ಅರ್ಜಿಯನ್ನು ವಜಾಗೊಳಿಸಿದೆ.
2023–24ನೇ ಸಾಲಿನಲ್ಲಿ ಆಯೋಗವು ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಪರೀಕ್ಷೆ ಕೈಗೊಂಡಿತ್ತು. ಈ ವೇಳೆ ಶಾಂತಾ ಹೊಸಮನಿ ಅವರೊಂದಿಗೆ ನೇಮಕಾತಿ ವಿಚಾರವಾಗಿ ನಿರಂತರ ಸಂಪರ್ಕ ಹೊಂದಿದ್ದ ಕೆಎಎಸ್ ಅಭ್ಯರ್ಥಿ ಮಮಿತಾ, ಲಕ್ಷಾಂತರ ರೂ.ನೀಡಿದ್ದಾರೆ ಎಂದು ಆರೋಪಿಸಿ ವಿಧಾನಸೌಧ ಠಾಣೆಯಲ್ಲಿ ವಿದ್ಯಾರ್ಥಿ ಸಂಘಟನೆ ಮುಖಂಡರೊಬ್ಬರು ಪ್ರಕರಣ ದಾಖಲಿಸಿದ್ದರು. ಇದರ ಬಗ್ಗೆ ತನಿಖೆ ನಡೆಸಿದ ಸಿಐಡಿ ಅಧಿಕಾರಿಗಳು, ಆರೋಪಿ ಶಾಂತಾ ಹೊಸಮನಿ, ಮಮಿತಾಳೊಂದಿಗೆ ಹಲವು ಬಾರಿ □ನ್ ಕರೆ ಮಾಡಿರುವುದನ್ನು ಪತ್ತೆ ಮಾಡಿತ್ತು. ಬಂಧನ ಭೀತಿ ಎದುರಿಸುತ್ತಿದ್ದ ಮಮಿತಾ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದರು.
**ಕೆಎಎಸ್ ನೇಮಕಾತಿಯಲ್ಲೂ ಭ್ರಷ್ಟಾಚಾರ:** ಪಶುವೈದ್ಯಾಧಿಕಾರಿ 400 ಹುದ್ದೆಗಳ ನೇಮಕಾತಿ ಹಗರಣದ ಜತೆಗೆ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪರೀಕ್ಷೆಯಲ್ಲೂ ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆದಿದೆ. ಈಗಾಗಲೇ ಸರಣಿ ಹಗರಣಗಳ ಆರೋಪ ಹೊತ್ತಿರುವ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಇ.ಡಿ ಕಸ್ಟಡಿಯಲ್ಲಿ ಇದ್ದಾರೆ. ಮಧ್ಯವರ್ತಿ ಬಸವರಾಜ್ ಕನ್ನಾಳೆ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಈ ಇಬ್ಬರು ಸೇರಿಕೊಂಡು ಪಶುವೈದ್ಯಾಧಿಕಾರಿಗಳ ನೇಮಕಾತಿ ಸೇರಿ ಹಲವು ನೇಮಕಾತಿಯಲ್ಲಿ ಅಕ್ರಮ ಎಸಗಿರುವುದು ಒಂದೊಂದಾಗಿ ಬೆಯಲಿಗೆ ಬರುತ್ತಿವೆ.




ಆಯೋಗದಲ್ಲಿ ನಡೆದಿರುವ ಪರೀಕ್ಷಾ ಹಗರಣದ ಪ್ರಮುಖ ಆರೋಪಿ ಎನ್ನಲಾದ ಮಾಜಿ ಅಧ್ಯಕ್ಷ ಸಿಐಡಿ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದಾರೆ. ಆರೋಪಿ ಶಾಂತಾ ಹೊಸಮನಿ ಅವರು ಒಂದು ಬಾರಿಗೆ ಸಿಐಡಿ ವಿಚಾರಣೆಗೆ ಹಾಜರಾಗಿ ಪುನಃ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇದರ ನಡುವೆ ಹೈಕೋರ್ಟ್ ಕೆಪಿಎಸ್‌ಸಿಯಲ್ಲಿ ಭ್ರಷ್ಟಾಚಾರದ ಕುರಿತು ಸಮಗ್ರ ತನಿಖೆಗೆ ಎಸ್‌ಐಟಿ ರಚನೆ ಮಾಡಿತ್ತು. ಆದರೆ, ರಾಜ್ಯ ಸರ್ಕಾರ ತಮ್ಮ ಗಮನಕ್ಕೆ ತರದೇ ಅಧಿಕಾರಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ ಎಂದು ಆರೋಪಿಸಿ, ಹೈಕೋರ್ಟ್ ಆದೇಶದ ವ್ಯತಿರಿಕ್ತವಾಗಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮುಂದಾಗಿದ್ದಾರೆ ಎನ್ನಲಾಗಿದೆ.

# 2,500 ರೂಪಾಯಿ ಪರಿಹಾರಕ್ಕೆ ಮುನೇನಕೊಪ್ಪ ಕಿಡಿ

ನವಲಗುಂದ: ಮುಂಗಾರು ಮಳೆ ಕೈಕೊಟ್ಟು ರೈತರು ಬರದ ಸಂಕಷ್ಟಕ್ಕೆ ಸಿಲುಕಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ಘೋಷಿಸಿರುವ ಕೇವಲ 2,500 ಇನ್‌ಪುಟ್ ಸಬ್ಸಿಡಿ ರೈತರ ನೋವಿಗೆ ಯಾವುದೇ ರೀತಿಯ ಪರಿಹಾರವಾಗುವುದಿಲ್ಲ ಎಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮಳೆ ಕೈಕೊಟ್ಟ ಪರಿಣಾಮ ಬೆಳೆ ನಷ್ಟ, ಬಿತ್ತನೆ ವೆಚ್ಚ, ಗೊಬ್ಬರ–ಬೀಜಗಳ ಬೆಲೆ ಏರಿಕೆ ಸೇರಿದಂತೆ ಹಲವು ಸಮಸ್ಯೆಗಳಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ, ಇಂತಹ ಸಂದರ್ಭದಲ್ಲಿ ಸರ್ಕಾರ ಘೋಷಿಸಿರುವ 2,500 ಪರಿಹಾರ ರೈತರು ಮಾಡಿರುವ ಖರ್ಚಿಗೆ ಹೋಲಿಸಿದರೆ ಅತ್ಯಲ್ಪ ಎಂದು ಮುನೇನಕೊಪ್ಪ ಆರೋಪಿಸಿದ್ದಾರೆ.
ಹಿಂದಿನ ಸರ್ಕಾರಗಳಲ್ಲಿ 33,600ರವರೆಗೆ ಪರಿಹಾರ
ಹಿಂದಿನ ಬಿಜೆಪಿ ಸರ್ಕಾರಗಳ ಅವಧಿಯಲ್ಲಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರಗಳು ಅತಿವೃಷ್ಟಿ ಸೇರಿದಂತೆ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಪರಿಹಾರ ನೀಡಿದ್ದವು ಎಂದು ಮುನೇನಕೊಪ್ಪ ಹೇಳಿದ್ದಾರೆ. ಪ್ರತಿ ಹೆಕ್ಟೇರ್‌ಗೆ 33,600, 27,600 ಹಾಗೂ 13,600 ವರೆಗೆ ಪರಿಹಾರ ನೀಡಲಾಗಿತ್ತು ಎಂದು ಅವರು ಉಲ್ಲೇಖಿಸಿದ್ದಾರೆ. "ಹಿಂದಿನ ಸರ್ಕಾರಗಳು ಪ್ರಕೃತಿ ವಿಕೋಪದಿಂದ ರೈತರು ಸಂಕಷ್ಟಕ್ಕೆ ಸಿಲುಕಿದಾಗ ಸಾವಿರಾರು ರೂಪಾಯಿ ಪರಿಹಾರ ನೀಡಿವೆ. ಆದರೆ ಇಂದು ಕೃಷಿ ವೆಚ್ಚ ಮತ್ತಷ್ಟು ಹೆಚ್ಚಾಗಿರುವ ಸಂದರ್ಭದಲ್ಲಿ ರೈತನಿಗೆ ಕೇವಲ 2,500 ನೀಡುವುದು ಯಾವ ನ್ಯಾಯ?" ಎಂದು ಮುನೇನಕೊಪ್ಪ ಪ್ರಶ್ನಿಸಿದ್ದಾರೆ. ಇಂದಿನ ಕೃಷಿ ವೆಚ್ಚ ಗಣನೀಯವಾಗಿ ಹೆಚ್ಚಾಗಿದೆ. ಒಂದು ಚೀಲ ಡಿಎಪಿ ಗೊಬ್ಬರಕ್ಕೆ 2 ಸಾವಿರದಿಂದ 3 ಸಾವಿರದವರೆಗೆ ಖರ್ಚಾಗುತ್ತಿದೆ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಒಂದು ಎಕರೆ ಜಮೀನಿನ ಬಿತ್ತನೆ ಹಾಗೂ ಆರಂಭಿಕ ಕೃಷಿ ಚಟುವಟಿಕೆಗಳಿಗೆ 25 ಸಾವಿರದಿಂದ 30 ಸಾವಿರದವರೆಗೆ ವೆಚ್ಚವಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.
"ಒಂದು ಎಕರೆಗೆ 25–30 ಸಾವಿರ ಖರ್ಚು ಮಾಡಿ ಬಿತ್ತನೆ ಮಾಡಿದ ರೈತನಿಗೆ ಬೆಳೆ ಕೈಕೊಟ್ಟಾಗ ಸರ್ಕಾರ 2,500 ಕೊಟ್ಟರೆ ಆ ಹಣದಿಂದ ರೈತನ ಯಾವ ನಷ್ಟ ತುಂಬಲು ಸಾಧ್ಯ?" ಎಂದು ಅವರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ರೈತರ ಸಂಕಷ್ಟದ ಸಂದರ್ಭದಲ್ಲಿ ಹಿಂದಿನ ಸರ್ಕಾರಗಳು ಕೈಗೊಂಡ ಕ್ರಮಗಳನ್ನು ಉಲ್ಲೇಖಿಸಿದ ಮುನೇನಕೊಪ್ಪ, ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 25 ಸಾವಿರ ರೂಪಾಯಿಗಳ, ರೈತರ ಸಾಲಮನ್ನಾ ಸೇರಿದಂತೆ ರೈತಪರ ಕ್ರಮಗಳನ್ನು ಕೈಗೊಳ್ಳಲಾಗಿತ್ತು ಎಂದು ಹೇಳಿದ್ದಾರೆ. ಆಗಿನ ಪರಿಸ್ಥಿತಿಗೆ ಹೋಲಿಸಿದರೆ ಇಂದು ಕೃಷಿ ವೆಚ್ಚ ಮತ್ತಷ್ಟು ಏರಿಕೆಯಾಗಿದೆ. ಹೀಗಾಗಿ ರೈತರ ಸಂಕಷ್ಟವನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠ 50 ಸಾವಿರ ಮಧ್ಯಂತರ ಪರಿಹಾರ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ. "ರೈತರು ಸಾವಿರಾರು ರೂಪಾಯಿ ಖರ್ಚು ಮಾಡಿ ಬೆಳೆ ಬೆಳೆಯುತ್ತಾರೆ. ಮಳೆ ಕೈಕೊಟ್ಟು ಬೆಳೆ ನಷ್ಟವಾದಾಗ ಸರ್ಕಾರ ನೀಡುತ್ತಿರುವ 2,500 ಯಾವ ರೀತಿಯ ನೆರವು? ರೈತರ ವಾಸ್ತವಿಕ ನಷ್ಟ ಮತ್ತು ಕೃಷಿ ವೆಚ್ಚವನ್ನು ಪರಿಗಣಿಸಿ ಸರ್ಕಾರ ಕನಿಷ್ಠ 50 ಸಾವಿರ ಪರಿಹಾರ ನೀಡಬೇಕು" ಎಂದು ಮುನೇನಕೊಪ್ಪ ಒತ್ತಾಯಿಸಿದ್ದಾರೆ.

SAMALOCHANE RANEBENNURSUDDI
Kannada Daily Morning

ಸಮಾಲೋಚನೆ ಸುದ್ದಿ

ಭಾನುವಾರ 27 ಸೆಪ್ಟೆಂಬರ್ 2026
27 SEPTEMBER 2026


# ಸಂತ–ಶರಣರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಿ: ಸ.ಸ. ಪ್ರಭುಜಿ ಮಹಾರಾಜರು

## ಬಾಡಗಿ ಜಾತ್ರೆಯಲ್ಲಿ ಮೊಳಗಿದ ಆಧ್ಯಾತ್ಮಿಕ ಸಂದೇಶ । ಭಕ್ತಿ, ಆಧ್ಯಾತ್ಮದ ಸಂಗಮದಲ್ಲಿ ಬಾಡಗಿ ಜಾತ್ರಾ ಮಹೋತ್ಸವ

**ಬಾಗಲಕೋಟೆ:** ಬಾಹುಸಾಹೇಬ ಮಹಾರಾಜರ ಹೇಳಿದಂತೆ, ನಾಮ ತೆಗೆದುಕೊಳ್ಳಬೇಕು, ನಿಯಮಗಳನ್ನು ಪಾಲಿಸಬೇಕು. ಸದ್ಗುರುವಿಗೆ ಶರಣಾಗಬೇಕು, ಸದ್ಗುರುವಿನಿಂದ ಉಪದೇಶ ಪಡೆದುಕೊಳ್ಳಬೇಕು ಹಾಗೂ ಸದ್ಗುರುಗಳು ಹೇಳಿದ ಮಾರ್ಗದಲ್ಲಿ ನಡೆಯಬೇಕು. ಎಂದು ಇಂಚಗೇರಿ ಮಠದ ಸ.ಸ. ಪ್ರಭುಜಿ ಮಹಾರಾಜರು ಹೇಳಿದರು.

ಅಥಣಿ ತಾಲೂಕಿನ ಬಾಡಗಿ ಗ್ರಾಮದಲ್ಲಿ ಸಿದ್ದಪುರುಷ, ಮಹಾನ್ ಧನ್ವಂತರಿ ಶ್ರೀ ಸ.ಸ. ಚನ್ನಸಂಗಮೇಶ್ವರ ಮಹಾರಾಜರ ಜಾತ್ರಾ ಮಹೋತ್ಸವದ ನಿಮಿತ್ತ ನಡೆದ ಸುವಿಚಾರ ಹಾಗೂ ರಥೋತ್ಸವ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಸಂತ–ಶರಣರು ತಮ್ಮ ಬದುಕಿನ ಮೂಲಕ ಸಮಾಜಕ್ಕೆ ಸನ್ಮಾರ್ಗ ತೋರಿಸಿದ್ದಾರೆ. ಅವರ ವಚನ ಹಾಗೂ ತತ್ವಗಳನ್ನು ಕೇವಲ ಕೇಳುವುದಕ್ಕೆ ಸೀಮಿತಗೊಳಿಸದೆ, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸದ್ಗುರುವೇ ನಮ್ಮ ಬದುಕಿನ ಎಲ್ಲ ಆಧಾರ ಎಂದು ತಿಳಿದುಕೊಂಡು, ಅವರು ತೋರಿಸಿದ ಮಾರ್ಗದಲ್ಲಿ ನಡೆಯಬೇಕು. ಭಕ್ತಿ, ಶ್ರದ್ಧೆ, ಆಸಕ್ತಿ ಮತ್ತು ಪ್ರೇಮದಿಂದ ಸದ್ಗುರುವಿನ ಸೇವೆ ಮಾಡಬೇಕು. ಸದ್ಗುರುವೇ ನಮ್ಮ ಬದುಕಿನ ಎಲ್ಲ ಆಧಾರ ಎಂದು ತಿಳಿದುಕೊಂಡು, ಅವರು ತೋರಿಸಿದ ಮಾರ್ಗದಲ್ಲಿ ನಡೆಯಬೇಕು ಎಂದರು.

ರೈತ ಸಂಘದ ರಾಜ್ಯ ಗೌರವಾಧ್ಯಕ್ಷರಾದ ಶಶಿಕಾಂತ ಗೂರುಜಿ ಮಾತನಾಡಿ ಅವರು ಹಿಂದಿನ ಕಾಲದ ಮಹನೀಯರು ಹೆಚ್ಚಿನ ವಿದ್ಯಾಭ್ಯಾಸ ಮಾಡದಿದ್ದರೂ, ಶಾಸ್ತ್ರ–ಪುರಾಣಗಳ ಆಳವಾದ ಅಧ್ಯಯನ ನಡೆಸದಿದ್ದರೂ, ಗುರುವಿನ ಮೇಲೆ ಅಖಂಡವಾದ ವಿಶ್ವಾಸವನ್ನಿಟ್ಟುಕೊಂಡು ಆಧ್ಯಾತ್ಮಿಕ ಸಾಧನೆಯ ಮೂಲಕ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದರು. ಗುರುವಿನ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು, ಭಕ್ತಿ ಹಾಗೂ ಶ್ರದ್ಧೆಯಿಂದ ನಡೆದುಕೊಂಡಾಗ ಬದುಕಿನಲ್ಲಿ ಬದಲಾವಣೆ ಸಾಧ್ಯ. ಗುರುಗಳು ತೋರಿಸುವ ಮಾರ್ಗವನ್ನು ನಂಬಿಕೆಯಿಂದ ಅನುಸರಿಸುವುದೇ ನಿಜವಾದ ಶರಣಾಗತಿ ತಮ್ಮ ಜೀವನದಲ್ಲಿ ಸಾವಿರಾರು ಅಂತರಜಾತಿ ವಿವಾಹಗಳನ್ನು ನೆರವೇರಿಸಿದ ಪ್ರಸಂಗವನ್ನು ವಿವರಿಸಿದ ಅವರು, ಸಮಾಜದಲ್ಲಿ ಜಾತಿ–ಧರ್ಮದ ಗೋಡೆಗಳನ್ನು ನಿರ್ಮಿಸುವುದಕ್ಕಿಂತ ಅವುಗಳನ್ನು ಮೀರಿ ಮಾನವೀಯ ಸಂಬಂಧಗಳಿಗೆ ಆದ್ಯತೆ ನೀಡಬೇಕು, ಒಮ್ಮೆ ಇಂಚಗೇರಿ ಮಠಕ್ಕೆ ಬಂದ ಸಂದರ್ಭದಲ್ಲಿ, "ಸ್ವಾಮೀಜಿ, ಇಷ್ಟೊಂದು ಮದುವೆಗಳನ್ನು ಮಾಡಿಸುತ್ತೀರಿ; ನಿಮಗೆ ಏನು ಸಿಗುತ್ತದೆ?" ಎಂದು ಯಾರೋ ಪ್ರಶ್ನಿಸಿದಾಗ, ಅದಕ್ಕೆ ಯಾವುದೇ ವೈಯಕ್ತಿಕ ಸ್ವಾರ್ಥವಿಲ್ಲದೆ ಸಮಾಜದಲ್ಲಿ ಪ್ರೀತಿ, ಸಮಾನತೆ ಮತ್ತು ಸೌಹಾರ್ದ ಬೆಳೆಸುವುದೇ ಉದ್ದೇಶ ಎಂದು ಹೇಳಿದರು.



> ರೈತನೆಂದರೆ ಕೇವಲ ಹೊಲದಲ್ಲಿ ದುಡಿಯುವವನು ಅಲ್ಲ; ಇಡೀ ಸಮಾಜಕ್ಕೆ ಅನ್ನ ನೀಡುವ ಅನ್ನದಾತ. ಬಿಸಿಲು, ಮಳೆ, ಗಾಳಿ ಎನ್ನದೆ ಮಣ್ಣಿನೊಂದಿಗೆ ಬೆವರು ಸುರಿಸಿ ಬೆಳೆ ಬೆಳೆಯುವ ರೈತನ ಬದುಕಿಗೂ ಗೌರವ ನೀಡಿ. ಮಕ್ಕಳ ಭವಿಷ್ಯಕ್ಕೆ ನೌಕರಿಯಷ್ಟೇ ಮುಖ್ಯವಲ್ಲ; ದುಡಿಮೆ, ಸ್ವಾಭಿಮಾನ, ಜವಾಬ್ದಾರಿ ಮತ್ತು ನೆಲದ ನಂಟು ಕೂಡ ಮುಖ್ಯ. ಆದ್ದರಿಂದ ಮನೆಗೆ ಹೆಣ್ಣು ಕೇಳಲು ಬಂದಾಗ, ರೈತನನ್ನೂ ಗೌರವದಿಂದ ಪರಿಗಣಿಸಿ–ರೈತನಿಗೆ ಹೆಣ್ಣು ಕೊಡಿ, ರೈತನ ಬದುಕಿಗೆ ಬೆಂಬಲವಾಗಿ ನಿಲ್ಲಿ.
> । ಶಶಿಕಾಂತ ಗೂರುಜಿ, ರಾಜ್ಯ ರೈತ ಸಂಘದ ಗೌರವಾಧ್ಯಕ್ಷರು

ಅಥಣಿ ಮಾಜಿ ಶಾಸಕ ಶಹಾಜಾನಂದ ಡೊಂಗರಗಾಂವ ಮಾತನಾಡಿ, 'ಜೈ ಜವಾನ್, ಜೈ ಕಿಸಾನ್' ಎಂಬ ಘೋಷಣೆಯ ಆಶಯದಂತೆ ದೇಶದ ಗಡಿಯಲ್ಲಿ ನಿಂತು ರಾಷ್ಟ್ರವನ್ನು ರಕ್ಷಿಸುತ್ತಿರುವ ಸೈನಿಕರು ಹಾಗೂ ದೇಶದ ಅನ್ನದಾತರಾದ ರೈತರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ದೇಶದ ರಕ್ಷಣೆಗೆ ಸೈನಿಕರು ಸಲ್ಲಿಸುತ್ತಿರುವ ಸೇವೆ ಹಾಗೂ ರೈತರು ದೇಶದ ಜನತೆಗೆ ಅನ್ನ ನೀಡುವ ಮೂಲಕ ಮಾಡುತ್ತಿರುವ ಸೇವೆ ಅಮೂಲ್ಯವಾದದ್ದು ಎಂದರು.

### ಮಾಜಿ ಹಾಗೂ ಹಾಲಿ ಸೈನಿಕರಿಗೆ ಸನ್ಮಾನ

**ದೇಶದ ಗಡಿ ಕಾಯುವ ಮೂಲಕ ರಾಷ್ಟ್ರದ ಭದ್ರತೆಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿದ ಹಾಲಿ ಹಾಗೂ ಮಾಜಿ ಸೈನಿಕರನ್ನು ಗೌರವಿಸುವ ಸನ್ಮಾನ ಸಮಾರಂಭವು ಜಾತ್ರಾ ಮಹೋತ್ಸವದ ಅಂಗವಾಗಿ ಗೌರವ ಹಾಗೂ ಹೆಮ್ಮೆಯ ವಾತಾವರಣದಲ್ಲಿ ನಡೆಯಿತು. ದೇಶಸೇವೆ ಸಲ್ಲಿಸುತ್ತಿರುವ ಹಾಗೂ ಸಲ್ಲಿಸಿ ನಿವೃತ್ತರಾದ ವೀರಯೋಧರಿಗೆ ಗೌರವ ಸಲ್ಲಿಸಿ, ಅವರ ತ್ಯಾಗ, ಸೇವೆ ಹಾಗೂ ಸಾಹಸವನ್ನು ಸ್ಮರಿಸಲಾಯಿತು. ಕಾರ್ಯಕ್ರಮದಲ್ಲಿ ಸೈನಿಕರಿಗೆ ಶಾಲು ಹಾಗೂ ಹಾರ ಹಾಕಿ ಗೌರವಿಸಲಾಯಿತು.**

ಕಾರ್ಯಕ್ರಮ ನಿರೂಪಣೆಯನ್ನು ಶಿಕ್ಷಕರಾದ ಬಿ. ಕೆ. ಮುಧೋಳ ಅವರು ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಬಾಡಗಿ ಮಠದ ಸಿದಲಿಂಗ ಸಾದು ಮಹಾರಾಜರು, ಚಿಕ್ಕಾಲಗುಂಡಿ ಮಠದ ಶಿವಶರಣಾನಂದ ಸ್ವಾಮೀಜಿ, ಕಕಮರಿ ಮಠದ ಆತ್ಮಾನಂದ ಸ್ವಾಮೀಜಿ, ಅಥಣಿ ಶಾಸಕ ಮಾಜಿ ಶಾಸಕ ಮಹೇಶ್ ಕುಮಟಳ್ಳಿ, ಬಾಗಲಕೋಟೆ ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಂಟಿ ನಿರ್ದೇಶಕ ಸಿದ್ಧರಾಮೇಶ್ವರ ಉಕ್ಕಲಿ, ಬಾಗಲಕೋಟೆ ಜಿಲ್ಲೆಯ ಉಪ ನಿರ್ದೇಶಕ ಮಲ್ಲನಗೌಡ ಝುರೆ, ಸಿದ್ದು ಹಳ್ಳಿ, ಚನ್ನಪ್ಪ ನ್ಯಾಮಗೌಡ, ವಿಠ್ಠಲ ಮುಧೋಳ, ಗುರಪ್ಪ ನ್ಯಾಮಗೌಡ, ಮಹಾಂತೇಶ ಮಮದಾಪೂರ, ವೈದ್ಯರು, ಸೈನಿಕರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಂಸ್ಥೆಯ ಏಳಿಗೆಗೆ ಸದಸ್ಯರು, ಸಿಬ್ಬಂದಿ ಕೊಡುಗೆ ಅಪಾರ : ಅಪ್ಪು ಕೊಟಗಿ

**ಪ್ರಿಯದರ್ಶಿನಿ ಸಹಕಾರಿ ಸಂಘದ 27ನೇ ವಾರ್ಷಿಕ ಮಹಾಸಭೆ:**

**ಗಜೇಂದ್ರಗಡ :** ನಮ್ಮ ಹಣಕಾಸು ಸಂಸ್ಥೆಯ ಏಳಿಗೆಯಲ್ಲಿ ಠೇವಣಿದಾರರ, ಷೇರುದಾರರ ಮತ್ತು ಸಾಲಗಾರರ ಕೊಡುಗೆ ಅಪಾರವಾದದ್ದು ಅದರೊಂದಿಗೆ ಸಂಸ್ಥೆಯ ಸಿಬ್ಬಂದಿಗಳ ಕಾರ್ಯವೈಖರಿ ಮೆಚ್ಚುವಂತಹದ್ದು ಎಂದು ಪ್ರಿಯದರ್ಶಿನಿ ವಿವಿಧೋದ್ದೇಶಗಳ ಸಹಕಾರಿ ಸಂಘದ ಅಧ್ಯಕ್ಷರಾದ ಮಾಗುಂಡಪ್ಪ (ಅಪ್ಪು) ಕೊಟಗಿ ಹೇಳಿದರು.

ನಗರದ ಉಣಚಗೇರಿ ರಸ್ತೆಯ ಶ್ರೀ ವಿಘ್ನೇಶ್ವರ ವಿದ್ಯಾವರ್ಧಕ ಸಂಘ ಮತ್ತಿಕಟ್ಟಿ ಕಾಲೇಜು ಆವರಣದಲ್ಲಿ ಜರುಗಿದ ಪ್ರಿಯದರ್ಶಿನಿ ವಿವಿಧೋದ್ದೇಶಗಳ ಸಹಕಾರಿ ಸಂಘ'ದ 2025–26ನೇ ಸಾಲಿನ 27ನೇ ವರ್ಷದ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡುತ್ತ. ನಮ್ಮ ಹಿರಿಯರು ಜನಸಾಮಾನ್ಯರ ಆರ್ಥಿಕ ಪರಿಸ್ಥಿತಿ ಮತ್ತು ಅವರ ಉದ್ಯೋಗಗ–ಕ್ಕೆ ಸಹಕಾರಿಯಾಗಲೆಂದು ಈ ಹಣಕಾಸು ಸಂಸ್ಥೆಯನ್ನು ಸ್ಥಾಪಿಸಿದರು ಇಂದು ಆ ಉದ್ದೇಶ ಸಾಕಾರವಾಗುತ್ತಿದೆ. ಪ್ರಸಕ್ತ ವರ್ಷದಲ್ಲಿ 15 ಲಕ್ಷ ರೂ ಲಾಭವನ್ನು ಹೊಂದಿದ್ದು ಈ ಹಣಕಾಸು ಸಂಸ್ಥೆ ಇನ್ನಷ್ಟು ಪ್ರಗತಿ ಹೊಂದಲು ಸಾಲ ತೆಗೆದು–ಕೊಂಡ ಸದಸ್ಯರು ಸರಿಯಾದ ಸಮಯಕ್ಕೆ ಸಾಲ ಮರುಪಾವತಿ ಮಾಡಿ ಉತ್ತಮ ಗ್ರಾಹಕರೆನಿಸಿಕೊಳ್ಳಿ ಎಂದರು. ಸಂಘದ ಕಾರ್ಯದರ್ಶಿ ಅಮರಯ್ಯ ಗೌರಿಮಠ ಅವರು ವಾರ್ಷಿಕ ವರದಿ ವಾಚನ ಮಾಡಿದರು. ಸಾಮಾಜಿಕ ಹೊಣೆಗಾರಿಕೆಯ ಭಾಗವಾಗಿ ಸಂಘದ ಸದಸ್ಯರ ಪ್ರತಿಭಾವಂತ 30 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು ಮತ್ತು ಸಂಸ್ಥೆಗೆ ಗುರುತರ ಕೊಡುಗೆ ನೀಡಿದ 10 ಜನ ಹಿರಿಯ ಸದಸ್ಯರನ್ನು 'ವಿಶೇಷ ಸದಸ್ಯರು' ಎಂದು ಗುರುತಿಸಿ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

ಸಭೆಯಲ್ಲಿ ಸಂಘದ ನಿರ್ದೇಶಕರಾದ ನಾಗೇಶ ಲಕ್ಕಲಕಟ್ಟಿ, ಮಹಾಂತೇಶ ಸೊಮನಕಟ್ಟಿ, ಕಳಕಪ್ಪ ಪಟ್ಟಣಶೆಟ್ಟಿ, ನಿಂಗಬಸಪ್ಪ ಮಾಸ್ತಿ, ಕಂಟೇಪ್ಪ ಸಂಗನಾಳ, ಅವಿನಾಶ ಕೊಟಗಿ, ಗೀತಾ ವಾಲಿ, ಸಹನಾ ಕೊಟಗಿ ಹಾಗೂ ಲಕ್ಷ್ಮಣ ಮಲೋತ್ತರ ಅಮರಯ್ಯ ಗೌರಿಮಠ, ದಾವಲಸಾಬ್ ತಾಳಿಕೋಟಿ , ಮಂಜುನಾಥ ವೀರಶೆಟ್ಟಿ, ಅಶೋಕ ಬುಗುಡಿ, ಎಚ್. ಜಿ. ಕುಲಕರ್ಣಿ, ವಿ. ಎಂ. ಕಂಚಗಾರ, ನಾಗೇಶ ಕವಡಿಮಟ್ಟಿ, ಸಿದ್ದಲಿಂಗೇಶ ಹದ್ಲಿ ಮತ್ತು ಸುಮಂಗಲಾ ಯಂಕಂಚಿ ಉಪಸ್ಥಿತರಿದ್ದರು.



# ವಿದ್ಯಾರ್ಥಿಗಳಿಗೆ ಸಮಾಜಮುಖಿ ಚಿಂತನೆ ಅಗತ್ಯ

**ನರೇಗಲ್:** ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪಠ್ಯ ಶಿಕ್ಷಣದ ಜತೆಗೆ ಪಠ್ಯೇತರ ಚಟುವಟಿಕೆಗಳೂ ಅಗತ್ಯ. ವಿದ್ಯಾರ್ಥಿಗಳು ಅಂಕ ಗಳಿಸುವುದಕ್ಕಷ್ಟೇ ಸೀಮಿತವಾಗದೆ, ಜ್ಞಾನ ಸಂಪಾದನೆ, ಸಂಸ್ಕಾರ ಹಾಗೂ ಸಮಾಜಮುಖಿ ಚಿಂತನೆ ಬೆಳೆಸಿಕೊಳ್ಳಬೇಕು ಎಂದು ಗದಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಪ್ರಾಂಶುಪಾಲ ಡಾ. ಶಿವಣ್ಣ ಎಂ. ಕುರಿ ಹೇಳಿದರು.

ನರೇಗಲ್ ಪಟ್ಟಣದ ಶ್ರೀ ಮರಿಯಪ್ಪ ಬಾಳಪ್ಪ ಕಳಕೊಣ್ಣವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ 2026–27ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್, ರೋವರ್ಸ್, ರೇಂಜರ್ಸ್, ಮಹಿಳಾ ವೇದಿಕೆ ಹಾಗೂ ಯುವ ರೆಡ್‌ಕ್ರಾಸ್ ಸೇರಿದಂತೆ ವಿವಿಧ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಾಲೇಜು ಜೀವನದಲ್ಲಿ ವಿದ್ಯಾರ್ಥಿಗಳು ಪಠ್ಯದ ಜತೆಗೆ ಸಾಂಸ್ಕೃತಿಕ, ಕ್ರೀಡಾ ಹಾಗೂ ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದರಿಂದ ಆತ್ಮವಿಶ್ವಾಸ, ನಾಯಕತ್ವ ಗುಣ ಹಾಗೂ ಸಮಾಜದ ಬಗ್ಗೆ ಕಾಳಜಿ ಬೆಳೆಸಿಕೊಳ್ಳಲು ಸಾಧ್ಯ. ವಿದ್ಯಾರ್ಥಿ ಜೀವನದಲ್ಲಿ ರೂಢಿಸಿಕೊಳ್ಳುವ ಉತ್ತಮ ಅಭ್ಯಾಸಗಳೇ ಮುಂದಿನ ಬದುಕಿನ ವ್ಯಕ್ತಿತ್ವವನ್ನು ರೂಪಿಸುತ್ತವೆ ಎಂದರು.

ಶಿಕ್ಷಣವು ಕೇವಲ ಉದ್ಯೋಗ ಪಡೆಯುವ ಸಾಧನವಲ್ಲ. ಉತ್ತಮ ಬದುಕು ಕಟ್ಟಿಕೊಳ್ಳಲು ಅಗತ್ಯವಾದ ಜ್ಞಾನ ಮತ್ತು ಸಂಸ್ಕಾರವನ್ನು ನೀಡಬೇಕು. ವಿದ್ಯಾರ್ಥಿಗಳು ತಂದೆ–ತಾಯಿಗಳ ಕಷ್ಟವನ್ನು ಅರಿತು, ಸಮಯಪಾಲನೆ ಮತ್ತು ಶಿಸ್ತಿಗೆ ಆದ್ಯತೆ ನೀಡಬೇಕು. ಮನಸ್ಸನ್ನು ಚಂಚಲಗೊಳಿಸುವ ದುಶ್ಚಟಗಳಿಂದ ದೂರವಿದ್ದು, ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಎಂ. ಎಸ್. ಧಡೇಸೂರಮಠ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅಂಕ ಗಳಿಸುವುದಕ್ಕಷ್ಟೇ ಓದದೆ, ಜ್ಞಾನ ಸಂಪಾದಿಸುವ ಉದ್ದೇಶದಿಂದ ಅಧ್ಯಯನ ಮಾಡಬೇಕು. ಪಠ್ಯಪುಸ್ತಕಗಳ ಜತೆಗೆ ಉತ್ತಮ ಸಾಹಿತ್ಯ ಹಾಗೂ ಜ್ಞಾನವರ್ಧಕ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು. ಸಾಧಕರು, ಸಾಹಿತಿಗಳು ಹಾಗೂ ಮಹನೀಯರ ಜೀವನ ಮತ್ತು ಸಾಧನೆಗಳನ್ನು ತಿಳಿದುಕೊಂಡು ಅವರ ಜೀವನಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ತಂದೆ–ತಾಯಿಗಳು ಕಷ್ಟಪಟ್ಟು ಮಕ್ಕಳನ್ನು ಸಾಕಿ–ಸಲಹುತ್ತಿರುವುದನ್ನು ಅರಿತು, ಅವರ ನಿರೀಕ್ಷೆಗಳಿಗೆ ತಕ್ಕಂತೆ ಉತ್ತಮವಾಗಿ ಓದಿ ಸಮಾಜಕ್ಕೆ ಉಪಯುಕ್ತ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು. ಕಾಲೇಜಿನಿಂದ ಹೊರಬರುವಾಗ ಪದವಿಯ ಜತೆಗೆ ಉತ್ತಮ ವ್ಯಕ್ತಿತ್ವವನ್ನೂ ಹೊಂದಿರಬೇಕು ಎಂದು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲೆ ಡಾ. ಕಸ್ತೂರೆವ್ವ ಬಿ. ದಳವಾಯಿ, ವಿದ್ಯಾರ್ಥಿಗಳು ಕಾಲೇಜಿನಲ್ಲಿ ದೊರೆಯುವ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಂಡು ತಮ್ಮ ಪ್ರತಿಭೆ ಹಾಗೂ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಹಿರಿಯರು ಮತ್ತು ಶಿಕ್ಷಕರ ಮಾರ್ಗದರ್ಶನ ಪಡೆದು ಶ್ರದ್ಧೆಯಿಂದ ಅಧ್ಯಯನ ಮಾಡಿದಾಗ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ ಎಂದರು.

ಸ್ಪರ್ಧಾತ್ಮ ಪರೀಕ್ಷೆಯ ತರಬೇತುದಾರ ಉಪನ್ಯಾಸಕ ಮಲ್ಲಪ್ಪ ಹೊಸೂರ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ಸ್ಪಷ್ಟ ಗುರಿ, ಛಲ, ಶ್ರದ್ಧೆ ಹಾಗೂ ನಿರಂತರ ಅಧ್ಯಯನ ಅಗತ್ಯ. ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಗುರಿಯನ್ನು ಸ್ಪಷ್ಟವಾಗಿ ನಿರ್ಧರಿಸಿಕೊಂಡು ಅದನ್ನು ಸಾಧಿಸಲು ಸತತ ಪ್ರಯತ್ನ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಭೂದಾನಿ ಬಸವರಾಜ ಕಳಕೊಣ್ಣವರ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಅರುಣ ಕಾಮತ, ಶರಣಪ್ಪ ಕುರಿ, ರೇಣುಕಾ ಧರ್ಮಾಯತ, ಬಸೀರಾಬಾನು ನದಾಫ್, ಐಕ್ಯೂಎಸಿ ಸಂಚಾಲಕರಾದ ಜಯಶ್ರೀ ಬಿ. ಮುತಗಾರ, ಆಂತರಿಕ ಕಿರು ಪರೀಕ್ಷೆ ವಿಭಾಗದ ಸಂಚಾಲಕರಾದ ಎಸ್. ಎಸ್. ಸೂಡಿ, ಸಾಂಸ್ಕೃತಿಕ ವಿಭಾಗದ ಸಂಚಾಲಕರಾದ ಅಯ್ಯಪ್ಪ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸುನಂದಾ ಮುಂಜಿ, ಯುಯುಸಿಎಂಎಸ್ ವಿಭಾಗದ ಸಂಚಾಲಕರಾದ ಅನಿಲಕುಮಾರ, ಕ್ರೀಡಾ ವೀಭಾಗದ ಸಂಚಾಲಕರಾದ ವಿರೂಪಾಕ್ಷ ಆರ್, ಉದ್ಯೋಗ ಭರವಸೆ ಕೋಶದ ಸಂಚಾಲಕರಾದ ಶಿವಕುಮಾರ ಕುರುಬರ, ಮಾಹಿತಿ ಮತ್ತು ತಂತ್ರಜ್ಞಾನದ ಸಂಚಾಲಕರಾದ ಶಶಿಕಲಾ ವಿ. ಎಸ್. ಇದ್ದರು. ಉಪನ್ಯಾಸಕ ಎನ್.ಎಸ್. ಹೊನ್ನೂರು ನಿರೂಪಿಸಿದರು.

# ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಿಗೂ ಇರಲಿ ಆದ್ಯತೆ: ಬೆಟ್ಟದೂರು

**ಕೊಪ್ಪಳ:** ಶಾಲಾ ಕಾಲೇಜುಗಳಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಬೇಕು. ಪಠ್ಯವು ಜ್ಞಾನದ ದಾರಿಯಾದರೆ, ಪಠ್ಯೇತರ ಚಟುವಟಿಕೆಗಳು ಬದುಕಿಗೆ ದಾರಿದೀಪವಾಗಬಲ್ಲವು ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಪ್ರೊ.ಅಲ್ಲಮಪ್ರಭು ಬೆಟ್ಟದೂರು ಹೇಳಿದರು

ಇಲ್ಲಿನ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಪದವಿಯ ಪ್ರಥಮ ವರ್ಷದ ವಿದ್ಯಾರ್ಥಿನಿಯರ ಸ್ವಾಗತ ಸಮಾರಂಭ ಮತ್ತು ಕಾಲೇಜಿನ ವಿವಿಧ ಘಟಕಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಬದುಕು ರೂಪಿಸುವ, ಜೀವನ ಕಟ್ಟಿಕೊಳ್ಳುವ ಶೈಕ್ಷಣೇತರ ಕಾರ್ಯಗಳಲ್ಲೂ ಕೊಪ್ಪಳದ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕಾದ ಅನಿವಾರ್ಯತೆ ಈಗ ಬಂದೊದಗಿದೆ. ಕೊಪ್ಪಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಮಾರು 202 ಕೈಗಾರಿಕೆಗಳು ತಲೆ ಎತ್ತಿದ್ದು, ಮತ್ತೆರಡು ಘಟಕಗಳು ವಿಸ್ತರಣೆಗೊಳ್ಳುವ ಸಿದ್ಧತೆಯಲ್ಲಿವೆ. ಇವೆಲ್ಲ ಮನುಷ್ಯನ ಉಸಿರಾಟಕ್ಕೆ ಮಾರಕ ಎಂದರು

ಕೊಪ್ಪಳ ಜಿಲ್ಲೆಯ ಪರಿಸರ ಹಾಳು ಮಾಡಿರುವ ಕೈಗಾರಿಕೆಗಳ ವಿರುದ್ಧ ನಡೆಯುತ್ತಿರುವ ಹೋರಾಟವು ಅಕ್ಟೋಬರ್ 30ರಂದು ವರ್ಷ ಪೂರೈಸಲಿದೆ. ಈ ಹೋರಾಟ ಇಂದಿನ ಹಾಗೂ ಮುಂದಿನ ಯುವಪೀಳಿಗೆಯ ಉಳಿವಿಗಾಗಿ ಮಾತ್ರ. ಇದು ಸರಕಾರದ ವಿರುದ್ಧದ ಹೋರಾಟವಲ್ಲ ಎಂದು ಸ್ಪಷ್ಟಪಡಿಸಿದ ಅವರು, ಇಂಥ ಹೋರಾಟಗಳಿಗೆ ವಿದ್ಯಾರ್ಥಿ ಸಮುದಾಯ ಬಲ ತುಂಬಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಗಣಪತಿ ಕೆ.ಲಮಾಣಿ ಮಾತನಾಡಿ, ಕಳೆದ ಕೆಲವು ವರ್ಷಗಳಿಂದ ಕಾಲೇಜು ಸಾಕಷ್ಟು ಅಭಿವೃದ್ಧಿ ಹೊಂದುತ್ತಿದ್ದು, ನುರಿತ ಅಧ್ಯಾಪಕ ವರ್ಗದ ಪರಿಣಾಮಕಾರಿ ಬೋಧನೆಯಿಂದ ಉತ್ತಮ ಫಲಿತಾಂಶ ಪಡೆಯುತ್ತಿದೆ. ಈ ವರ್ಷ ಪ್ರವೇಶ ಪಡೆದಿರುವ ವಿದ್ಯಾರ್ಥಿನಿಯರು ಕಾಲೇಜಿನ ವಿವಿಧ ಸಕಾರಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಾಧನೆ ಮಾಡುವ ಮೂಲಕ ಕಾಲೇಜಿಗೆ ಕೀರ್ತಿ ತರಬೇಕು ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಬೂದಿಹಾಳದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕ ಮೆಹಬೂಬ್ ಅಲಿ ಕೆ.ಎಂ., ಮಾತನಾಡಿ, ಗುರಿ, ಸಮಯ ಪ್ರಜ್ಞೆ, ಸ್ಪರ್ಧಾ ಮನೋಭಾವ, ಶ್ರದ್ಧೆ, ಆತ್ಮವಿಶ್ವಾಸ, ಬದುಕನ್ನೇ ಬದಲಿಸುವ ಈ ಐದು ಮಂತ್ರಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಶಿಕ್ಷಣ ಪ್ರೇಮಿಗಳಾದ ಬಿ.ಜಿ. ಕರಿಗಾರ ಮಾತನಾಡಿದರು. ಸಾಂಸ್ಕೃತಿಕ ವಿಭಾಗ, ಎನ್.ಎಸ್.ಎಸ್.ಘಟಕ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಲಲಿತಾ ಎನ್.ಕೆ. ಅವರು ಮಹಿಳಾ ಕಾಲೇಜಿನ ಉಗಮ ಮತ್ತು ವಿಕಾಸವನ್ನು ಪ್ರಾಸ್ತಾವಿಕದಲ್ಲಿ ಮನಮುಟ್ಟುವಂತೆ ತಿಳಿಸಿದರು. ಈ ವೇಳೆ ಐಕ್ಯೂಎಸಿ ಸಂಚಾಲಕರಾದ ಡಾ.ಶುಭಾ, ಕ್ರೀಡಾ ವಿಭಾಗದ ಮುಖ್ಯಸ್ಥ ಡಾ.ವಿಠೋಬ.ಎಸ್., ಗ್ರಂಥ ಪಾಲಕರಾದ ಡಾ. ಮಲ್ಲಿಕಾರ್ಜುನ. ಬಿ., ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುಖ್ಯರಾದ ಶುಭ ಟಿ.ಇ., ಐಟಿ ಘಟಕದ ಸುಮಿತ್ರ ಎಸ್.ವಿ., ವಿದ್ಯಾರ್ಥಿ ಕಲ್ಯಾಣಾಧಿಕಾರಿ ಸುಮಯ್ಯ.ಕೆ., ಕಚೇರಿ ಅಧೀಕ್ಷಕ ಅಲ್ಲಾಭಕ್ಷ, ಅತಿಥಿ ಉಪನ್ಯಾಸಕರ ಪ್ರತಿನಿಧಿ ಬಸವರಾಜ ಕರುಗಲ್, ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸಿ, ವಿವಿಧ ಕಾಲೇಜುಗಳಿಗೆ ವರ್ಗಾವಣೆಗೊಂಡಿರುವ ಡಾ.ಗವಿಸಿದ್ದಪ್ಪ ಮುತ್ತಾಳ, ಡಾ.ಹುಲಿಗೆಮ್ಮ, ಡಾ.ನರಸಿಂಹ, ಡಾ. ಪ್ರದೀಪಕುಮಾರ್ ವೇದಿಕೆಯಲ್ಲಿದ್ದರು. ಸಮಾರಂಭದಲ್ಲಿ ಬೋಧಕ–ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು. ನಾಗರತ್ನಾ ಮತ್ತು ಪವಿತ್ರ ನಿರೂಪಿಸಿದರು. ಐಶ್ವರ್ಯ ಮತ್ತು ಲಕ್ಷ್ಮೀ ಸ್ವಾಗತಿಸಿದರು. ಮಧುಮತಿ ವಂದಿಸಿದರು.



### ಹಬ್ಬದ ವಾತಾವರಣ

**ಪದವಿಯ ಪ್ರಥಮ ವರ್ಷದ ವಿದ್ಯಾರ್ಥಿನಿಯರಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭವು ಕಾಲೇಜಿನಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿತ್ತು. ವಿದ್ಯಾರ್ಥಿನಿಯರು ಸಮವಸ್ತ್ರದ ಬದಲು ಸೀರೆ ಹಾಗೂ ವಿವಿಧ ಸಾಂಪ್ರದಾಯಿಕ ಉಡುಗೆಯಲ್ಲಿ ಗಮನ ಸೆಳೆದರು. ಊಟೋಪಚಾರದಲ್ಲಿ ಲವಲವಿಕೆಯಿಂದ ಓಡಾಡಿದರು. ಉತ್ಸಾಹದಿಂದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದರು.**

# ಸರ್ಕಾರ 2500 ರೂ. ಬದಲು, 25 ಸಾವಿರ ನೀಡಲಿ: ಬೋಪಳಾಪುರ

**ರೋಣ:** ರೋಣ ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡಿರುವ ಸರ್ಕಾರದ ಕ್ರಮವನ್ನು ಸ್ವಾಗತಿಸುತ್ತೇವೆ ಎಂದು ಕರ್ನಾಟಕ ರೈತ ಸೇನೆ ತಾಲೂಕು ಅಧ್ಯಕ್ಷ ಶಿವಲಿಂಗಪ್ಪ ಬೋಪಳಾಪುರ ಹೇಳಿದರು.



ಪಟ್ಟಣದ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ರೈತರ ನೆರವಿಗಾಗಿ 2500 ರೂ. ನೀಡುವ ಸರ್ಕಾರದ ಹಣ ನಮಗೆ ಬೇಕಾಗಿಲ್ಲ. ಸಂಕಷ್ಟದ ಈ ಪರಿಸ್ಥಿತಿಯಲ್ಲಿಪ್ರತಿ ರೈತರಿಗೆ 25000 ರೂ. ನೆರವು ನೀಡಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರ ನೆರವು ನೀಡಿದರೆ ರೈತರ ಸಾಲ ಮನ್ನಾ ಮಾಡುವುದಾಗಿ ಸಿಎಂ ಡಿ.ಕೆ. ಶಿವಕುಮಾರ ಹೇಳಿದ್ದಾರೆ. ಹೀಗಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರಾಜ್ಯ ಸರ್ಕಾರಕ್ಕೆ ನೆರವು ನೀಡುವ ಮೂಲಕ ರೈತರ ಹಿತಾಸಕ್ತಿ ಕಾಪಾಡಬೇಕು ಎಂದು ಆಗ್ರಹಿಸಿದರು. ಹನುಮಂತ ಹಳ್ಳಳ್ಳಿ, ಯಲ್ಲಪ್ಪ ಚಲವಾದಿ, ಮರಿಯಪ್ಪ ದೊಡ್ಡಮನಿ, ಕಾಸಯ್ಯ ಪಾಟೀಲ, ಶಾಂತಪ್ಪ ನಾಶಿಪುಡಿ ಇದ್ದರು.

ಸಮಾಲೋಚನೆ ಸುದ್ದಿ
SAMALOCHANE RANEBENNURSUDDI
Kannada Daily Morning

## ಆನ್‌ಲೈನ್ ಶಾಪಿಂಗ್: ಬೇಕಾದ್ದನ್ನು ಕೊಳ್ಳುತ್ತಿದ್ದೇವೋ, ತೋರಿಸಿದ್ದನ್ನು ಕೊಳ್ಳುತ್ತಿದ್ದೇವೋ?

# ಅಗತ್ಯದ ಹೆಸರಿನಲ್ಲಿ ಆಸೆಗಳ ಖರೀದಿ ಕೈತಪ್ಪುತ್ತಿರುವುದು ವಸ್ತುವಲ್ಲ ಹಣ!



ಒಂದು ಕಾಲದಲ್ಲಿ ಮನುಷ್ಯನಿಗೆ ಏನು ಬೇಕು ಎಂಬುದು ಅವನಿಗೆ ಗೊತ್ತಿತ್ತು. ಬೇಕಾದ ವಸ್ತುವಿನ ಪಟ್ಟಿ ಮಾಡಿಕೊಂಡು ಮಾರುಕಟ್ಟೆಗೆ ಹೋಗುತ್ತಿದ್ದ. ಅಂಗಡಿಗೆ ಹೋಗಿ ವಸ್ತು ನೋಡುತ್ತಿದ್ದ, ಬೆಲೆ ಕೇಳುತ್ತಿದ್ದ, ಗುಣಮಟ್ಟ ಪರಿಶೀಲಿಸುತ್ತಿದ್ದ, ಅಗತ್ಯವಿದ್ದರೆ ಮಾತ್ರ ಖರೀದಿಸುತ್ತಿದ್ದ. ಈಗ ಕಾಲ ಬದಲಾಗಿದೆ. ಮಾರುಕಟ್ಟೆಗೆ ಹೋಗುವ ಅಗತ್ಯವೇ ಇಲ್ಲ. ಮಾರುಕಟ್ಟೆಯೇ ಮನುಷ್ಯನ ಮೊಬೈಲ್‌ಗೆ ಬಂದು ಕುಳಿತಿದೆ. ಬೆಳಗ್ಗೆ ಕಣ್ಣು ತೆರೆದ ಕೂಡಲೇ ಮೊಬೈಲ್, ರಾತ್ರಿ ಕಣ್ಣು ಮುಚ್ಚುವ ಮುನ್ನವೂ ಮೊಬೈಲ್. ಮಧ್ಯದಲ್ಲಿ "ನಿಮಗಾಗಿ ಆಯ್ಕೆ ಮಾಡಲಾಗಿದೆ", "ಇಂದು ಮಾತ್ರ ಆಫರ್", "ಇನ್ನೂ ಎರಡು ಗಂಟೆ ಮಾತ್ರ", "ಕಾರ್ಟ್‌ನಲ್ಲಿ ಉಳಿದಿರುವ ವಸ್ತು" ಎಂಬ ಸಂದೇಶಗಳು! ನಮಗೆ ಏನು ಬೇಕು ಎನ್ನುವುದನ್ನು ನಾವು ನಿರ್ಧರಿಸುವುದಕ್ಕಿಂತ ಮುಂಚೆಯೇ, ನಮಗೆ ಏನು ಬೇಕು ಎಂದು ಆನ್‌ಲೈನ್ ಮಾರುಕಟ್ಟೆ ನಿರ್ಧರಿಸಲು ಆರಂಭಿಸಿದೆ. ಅಚ್ಚರಿ ಎಂದರೆ, ನಿನ್ನೆವರೆಗೂ ನಮಗೆ ಗೊತ್ತೇ ಇರದ ವಸ್ತುವೊಂದು ಇಂದು ನಮ್ಮ ಜೀವನದ ಅತ್ಯಂತ ಅಗತ್ಯ ವಸ್ತುವಾಗಿ ಕಾಣುತ್ತದೆ. ಹಾಗಾದರೆ ಆನ್‌ಲೈನ್ ಶಾಪಿಂಗ್ ನಮ್ಮ ಅಗತ್ಯಗಳನ್ನು ಹೆಚ್ಚಿಸಿದೆಯೇ? ಅಥವಾ ನಮ್ಮ ಆಸೆಗಳಿಗೆ ಹೊಸ ಹೊಸ ಹೆಸರುಗಳನ್ನು ಕೊಟ್ಟಿದೆಯೇ? ಒಂದು ಕಾಲದಲ್ಲಿ "ಅಗತ್ಯ" ಎಂದರೆ ಜೀವನಕ್ಕೆ ಬೇಕಾದ ವಸ್ತು. "ಆಸೆ" ಎಂದರೆ ಇದ್ದರೆ ಚೆನ್ನಾಗಿರುತ್ತದೆ ಎನ್ನುವ ವಸ್ತು. ಆದರೆ ಈಗ ಈ ಎರಡರ ನಡುವಿನ ಗಡಿ ಬಹುತೇಕ ಅಳಿದುಹೋಗಿದೆ. ಮೊಬೈಲ್ ಇದೆ, ಆದರೆ ಹೊಸ ಮೊಬೈಲ್ ಬೇಕು. ಬಟ್ಟೆ ಇದೆ, ಆದರೆ ಹೊಸ ಮಾದರಿಯ ಬಟ್ಟೆ ಬೇಕು. ಚಪ್ಪಲಿ ಇದೆ, ಆದರೆ ಮತ್ತೊಂದು ಜೋಡಿ ಬೇಕು. ಅಡುಗೆಮನೆಯಲ್ಲಿ ಪಾತ್ರೆಗಳಿವೆ, ಆದರೂ ಹೊಸ ವಿನ್ಯಾಸದ ಪಾತ್ರೆಗಳು ಬೇಕು. ಮನೆಯಲ್ಲಿ ಕುರ್ಚಿಗಳಿವೆ, ಆದರೂ "ಫೋಲ್ಡಿಂಗ್ ಲೌಂಜ್ ಚೇರ್" ಬೇಕು. ಕಾಫಿ ಕುಡಿಯಲು ಕಪ್ ಇದೆ, ಆದರೆ "ಮಾರ್ನಿಂಗ್ ಕಾಫಿ ಕಪ್" ಬೇರೆ ಬೇಕು! ನೀರು ಕುಡಿಯಲು ಬಾಟಲಿ ಇದೆ, ಆದರೆ "ಇನ್ಸುಲೇಟೆಡ್ ಸ್ಮಾರ್ಟ್ ವಾಟರ್ ಬಾಟಲ್" ಬೇಕು. ಮನೆಯಲ್ಲೇ ಕತ್ತರಿ ಇದೆ, ಆದರೆ "ಮಲ್ಟಿಫಂಕ್ಷನ್ ಕಿಚನ್ ಸಿಸರ್ಸ್" ಇಲ್ಲವಂತೆ! ಹೀಗೆ ಅಗತ್ಯಗಳ ಪಟ್ಟಿ ಮುಗಿಯುವುದೇ ಇಲ್ಲ. ವಾಸ್ತವದಲ್ಲಿ ವಸ್ತುಗಳ ಕೊರತೆ ಇಲ್ಲ; ಕೊರತೆಯ ಭಾವನೆ ಮಾತ್ರ ಹೆಚ್ಚುತ್ತಿದೆ. ಆನ್‌ಲೈನ್ ಶಾಪಿಂಗ್‌ನ ದೊಡ್ಡ ಮಾಯೆ ಎಂದರೆ ಅದು ವಸ್ತುಗಳನ್ನು ಮಾತ್ರ ಮಾರುವುದಿಲ್ಲ; ಅದು "ಅಗತ್ಯ" ಎಂಬ ಭಾವನೆಯನ್ನೂ ಮಾರುತ್ತದೆ. "ಇದನ್ನು ಖರೀದಿಸಿದರೆ ನಿಮ್ಮ ಜೀವನ ಸುಲಭವಾಗುತ್ತದೆ", "ಇದನ್ನು ಹೊಂದಿದ್ದರೆ ನೀವು ಆಧುನಿಕರಾಗುತ್ತೀರಿ", "ಇದನ್ನು ಧರಿಸಿದರೆ ನಿಮ್ಮ ವ್ಯಕ್ತಿತ್ವ ಬದಲಾಗುತ್ತದೆ", "ಇದನ್ನು ಬಳಸಿದರೆ ನಿಮ್ಮ ಮನೆ ಸುಂದರವಾಗುತ್ತದೆ" ಎಂಬ ಸಂದೇಶಗಳು ನಿರಂತರವಾಗಿ ನಮ್ಮ ಮನಸ್ಸನ್ನು ತಟ್ಟುತ್ತವೆ. ಮನುಷ್ಯನಿಗೆ ವಸ್ತು ಬೇಕೋ ಬೇಡವೋ ಎಂಬ ಪ್ರಶ್ನೆಗಿಂತ, ವಸ್ತುವನ್ನು ನೋಡಿದ ಮೇಲೆ "ಇದು ನನಗೂ ಬೇಕು" ಎನ್ನುವ ಭಾವನೆ ಹುಟ್ಟುತ್ತದೆ. ಮೊದಲು ಅಂಗಡಿಗೆ ಹೋಗಿ ವಸ್ತು ಖರೀದಿಸುತ್ತಿದ್ದೆವು. ಈಗ ಮೊದಲು ವಸ್ತು ನಮ್ಮನ್ನು ಹುಡುಕಿಕೊಂಡು ಬರುತ್ತದೆ; ನಂತರ ನಾವು ಅದನ್ನು ಖರೀದಿಸುತ್ತೇವೆ. ಅದರಲ್ಲೂ "ಡಿಸ್ಕೌಂಟ್" ಎಂಬ ಪದಕ್ಕೆ ಮನುಷ್ಯನ ಮನಸ್ಸು ವಿಚಿತ್ರವಾಗಿ ದುರ್ಬಲವಾಗಿದೆ. ಸಾವಿರ ರೂಪಾಯಿ ವಸ್ತು ಎಂಟು ನೂರು ರೂಪಾಯಿಗೆ ಸಿಕ್ಕರೆ ಇನ್ನೂರು ರೂಪಾಯಿ ಉಳಿಸಿದೆವು ಎಂದು ಸಂತೋಷಪಡುತ್ತೇವೆ. ಆದರೆ ಆ ವಸ್ತು ನಮಗೆ ಬೇಕೇ ಇರಲಿಲ್ಲ ಎಂಬುದನ್ನು ಮರೆತುಬಿಡುತ್ತೇವೆ. ಬೇಕಿಲ್ಲದ ವಸ್ತುವಿನ ಮೇಲೆ ಎಂಟು ನೂರು ರೂಪಾಯಿ ಖರ್ಚು ಮಾಡಿ, ಇನ್ನೂರು ರೂಪಾಯಿ ಉಳಿಸಿದ್ದೇವೆ ಎಂದು ಸಂಭ್ರಮಿಸುವುದು ಯಾವ ಲೆಕ್ಕ? "ಬಯ್ ಒನ್, ಗೆಟ್ ಒನ್" ಎಂದರೆ ಒಂದು ಬೇಕಿದ್ದರೂ ಎರಡು ಖರೀದಿಸುತ್ತೇವೆ. "ಫ್ರೀ ಡೆಲಿವರಿ" ಎಂದರೆ ಇನ್ನೊಂದು ವಸ್ತುವನ್ನು ಸೇರಿಸುತ್ತೇವೆ. "ಕೂಪನ್ ಕೋಡ್" ಎಂದರೆ ಖರೀದಿಸದಿದ್ದರೆ ನಷ್ಟವಾಗುತ್ತದೆ ಎಂಬ ಭಾವನೆ! ಅಂಗಡಿಯವರು ನಮ್ಮ ಹಣ ಉಳಿಸಲು ಇಷ್ಟು ಕಾಳಜಿ ವಹಿಸುತ್ತಿದ್ದಾರೆಯೇ? ಇಲ್ಲ. ನಮ್ಮ ಜೇಬಿನಿಂದ ಇನ್ನಷ್ಟು ಹಣ ಹೊರಗೆ ಬರಲು ಹೊಸ ದಾರಿ ಹುಡುಕುತ್ತಿದ್ದಾರೆ. ನಾವು ಮಾತ್ರ "ಆಫರ್ ಸಿಕ್ಕಿತು" ಎಂದು ಸಂತೋಷಪಡುತ್ತೇವೆ. ಇದು ಕೇವಲ ವಸ್ತು ಖರೀದಿಸುವ ಅಭ್ಯಾಸವಲ್ಲ; ಮನಸ್ಸಿನ ಮೇಲೆ ನಡೆಯುತ್ತಿರುವ ವ್ಯಾಪಾರ. ಜಾಹೀರಾತುಗಳು ಮನುಷ್ಯನ ಮನಸ್ಸಿನ ದುರ್ಬಲತೆಗಳನ್ನು ಅರ್ಥಮಾಡಿಕೊಂಡಿವೆ. ನಮ್ಮ ವಯಸ್ಸು, ಆಸಕ್ತಿ, ಹುಡುಕಾಟ, ಹಿಂದಿನ ಖರೀದಿ ಎಲ್ಲವನ್ನೂ ಆಧರಿಸಿ ನಮಗೆ ಬೇಕಾದಂತೆ ವಸ್ತುಗಳನ್ನು ತೋರಿಸಲಾಗುತ್ತದೆ. ಒಂದು ಬಾರಿ ಯಾವುದಾದರೂ ವಸ್ತುವನ್ನು ಹುಡುಕಿದರೆ ಸಾಕು; ನಂತರ ಅದು ಎಲ್ಲೆಡೆ ಕಾಣಿಸಿಕೊಳ್ಳುತ್ತದೆ. ನಾವು "ಇದನ್ನು ನೋಡಬೇಕು" ಎಂದು ಮೊಬೈಲ್ ತೆರೆದರೆ, ಮೊಬೈಲ್ "ಇದನ್ನೇ ನೋಡಬೇಕು" ಎಂದು ನಮಗೆ ತೋರಿಸುತ್ತದೆ. ಕೊನೆಗೆ ಆಯ್ಕೆ ನಮ್ಮದೇ ಎಂದುಕೊಂಡರೂ, ನಮ್ಮ ಆಯ್ಕೆಯ ಸುತ್ತಲಿನ ಪರಿಸರವನ್ನು ಯಾರೋ ಈಗಾಗಲೇ ನಿರ್ಮಿಸಿರುತ್ತಾರೆ.

ಇನ್ನೊಂದು ವಿಚಿತ್ರ ಬೆಳವಣಿಗೆ ಎಂದರೆ "ಕಾರ್ಟ್" ಎಂಬ ಪದವೇ ನಮ್ಮ ಮನೋಭಾವದ ಪ್ರತಿಬಿಂಬವಾಗಿದೆ. ಆನ್‌ಲೈನ್ ಕಾರ್ಟ್‌ನಲ್ಲಿ ವಸ್ತುಗಳನ್ನು ಸೇರಿಸುವುದು ಸುಲಭ; ತೆಗೆದುಹಾಕುವುದು ಕಷ್ಟ. ಒಂದು ವಸ್ತು ನೋಡಿದೆವು, ಇಷ್ಟವಾಯಿತು, ಕಾರ್ಟ್‌ಗೆ ಸೇರಿಸಿದೆವು. ಮತ್ತೊಂದು ಕಂಡಿತು, ಅದನ್ನೂ ಸೇರಿಸಿದೆವು. ಮೂರನೆಯದು "ಬಹಳ ಉಪಯುಕ್ತ" ಎಂದು ಕಾಣಿಸಿತು, ಅದನ್ನೂ ಸೇರಿಸಿದೆವು. ಕೊನೆಗೆ ಕಾರ್ಟ್ ತುಂಬಿತು. ಆಗ ಮಾತ್ರ "ಇವೆಲ್ಲಾ ನನಗೆ ಬೇಕೇ?" ಎಂಬ ಪ್ರಶ್ನೆ ಬರುತ್ತದೆ. ಅಷ್ಟರೊಳಗೆ ಮನಸ್ಸು ಖರೀದಿಯ ಪರವಾಗಿ ತೀರ್ಪು ಕೊಟ್ಟಿರುತ್ತದೆ. ಇದರ ಪರಿಣಾಮ ಕುಟುಂಬದ ಆರ್ಥಿಕತೆಯ ಮೇಲೂ ಬೀಳುತ್ತಿದೆ. ಸಣ್ಣ ಸಣ್ಣ ಖರೀದಿಗಳು ದೊಡ್ಡ ಮೊತ್ತವಾಗುತ್ತವೆ. "ಇದು ಕೇವಲ 299 ರೂಪಾಯಿ", "ಅದು 499 ರೂಪಾಯಿ", "ಇದು 799 ರೂಪಾಯಿ" ಎಂದು ಪ್ರತಿಯೊಂದು ಖರೀದಿಗೂ ಸಮರ್ಥನೆ ಸಿಗುತ್ತದೆ. ಆದರೆ ತಿಂಗಳ ಕೊನೆಯಲ್ಲಿ ಬ್ಯಾಂಕ್ ಖಾತೆ ನೋಡಿದಾಗ ಆ ಸಣ್ಣ ಸಣ್ಣ 299, 499, 799ಗಳು ಸೇರಿ ಸಾವಿರಾರು ರೂಪಾಯಿಗಳಾಗಿರುತ್ತವೆ. ಹಣ ಎಲ್ಲಿಗೆ ಹೋಯಿತು ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ಮನೆಯಲ್ಲಿರುವ ವಸ್ತುಗಳನ್ನು ನೋಡಿದರೆ ಉತ್ತರ ಸಿಗುತ್ತದೆ. ಕೆಲವು ವಸ್ತುಗಳು ಬಳಕೆಯಾಗದೆ ಪ್ಯಾಕೆಟ್‌ನಲ್ಲೇ ಇರುತ್ತವೆ. ಕೆಲವು "ಒಂದು ದಿನ ಬಳಸುತ್ತೇನೆ" ಎಂಬ ಭರವಸೆಯಲ್ಲಿ ಮಲಗಿರುತ್ತವೆ. ಆ "ಒಂದು ದಿನ" ಯಾವಾಗ ಬರುತ್ತದೆ ಎಂಬುದು ಮಾತ್ರ ಯಾರಿಗೂ ಗೊತ್ತಿಲ್ಲ. ಮಕ್ಕಳ ಮೇಲೂ ಇದರ ಪರಿಣಾಮ ಗಂಭೀರವಾಗಿದೆ. ಹಿಂದೆ ಮಗು ಒಂದು ಆಟಿಕೆಯನ್ನು ಕೇಳಿದರೆ, ತಂದೆ, ತಾಯಿ "ಇದು ಈಗ ಬೇಕೇ?" ಎಂದು ಕೇಳುತ್ತಿದ್ದರು. ಈಗ ಮೊಬೈಲ್‌ನಲ್ಲಿ ಎರಡು ನಿಮಿಷ ಹುಡುಕಿದರೆ ನೂರಾರು ಆಟಿಕೆಗಳು ಕಣ್ಣಿಗೆ ಬೀಳುತ್ತವೆ. ಮಗುವಿಗೆ ಬೇಕಾದದ್ದು ಆಟಿಕೆ ಅಲ್ಲ; ಹೊಸ ಆಟಿಕೆಗಳ ನಿರಂತರ ಪ್ರವಾಹ. ಒಂದು ಆಟಿಕೆ ಬಂದ ಕೆಲವೇ ದಿನಗಳಲ್ಲಿ ಮತ್ತೊಂದು ಆಕರ್ಷಕವಾಗಿ ಕಾಣುತ್ತದೆ. ಹೀಗೆ ಮಕ್ಕಳಲ್ಲಿ "ಇದ್ದದ್ದರಲ್ಲಿ ಸಂತೋಷ" ಎನ್ನುವ ಮನೋಭಾವಕ್ಕಿಂತ "ಹೊಸದನ್ನು ಪಡೆಯಬೇಕು" ಎನ್ನುವ ಮನೋಭಾವ ಬೆಳೆದುಬರುತ್ತಿದೆ. ಮಕ್ಕಳಿಗೆ ವಸ್ತುಗಳನ್ನು ಕೊಡಿಸುವುದು ಸುಲಭ; ಆದರೆ ವಸ್ತುಗಳ ಮಿತಿಯನ್ನು ಕಲಿಸುವುದು ಪೋಷಕರ ಜವಾಬ್ದಾರಿ. ಇಲ್ಲಿ ಪ್ರಶ್ನೆ ಆನ್‌ಲೈನ್ ಶಾಪಿಂಗ್ ಒಳ್ಳೆಯದೋ ಕೆಟ್ಟದೋ ಎಂಬುದಲ್ಲ. ತಂತ್ರಜ್ಞಾನ ನೀಡಿರುವ ಈ ಸೌಲಭ್ಯವನ್ನು ಸಂಪೂರ್ಣವಾಗಿ ತಿರಸ್ಕರಿಸುವ ಅಗತ್ಯವೂ ಇಲ್ಲ. ದೂರದ ಊರಿನಲ್ಲಿರುವ ವ್ಯಕ್ತಿಗೂ ಬೇಕಾದ ವಸ್ತು ಸಿಗುತ್ತದೆ. ಬೆಲೆ ಹೋಲಿಕೆ ಮಾಡಬಹುದು. ಸಮಯ ಉಳಿಯುತ್ತದೆ. ಕೆಲವು ಸಂದರ್ಭಗಳಲ್ಲಿ ಇದು ನಿಜಕ್ಕೂ ಉಪಯುಕ್ತ. ಸಮಸ್ಯೆ ತಂತ್ರಜ್ಞಾನದಲ್ಲಿಲ್ಲ; ಸಮಸ್ಯೆ ನಮ್ಮ ನಿಯಂತ್ರಣ ಕಳೆದುಕೊಳ್ಳುವಲ್ಲಿ ಇದೆ. ಚಾಕು ಅಡುಗೆಗೂ ಬಳಸಬಹುದು, ಗಾಯಕ್ಕೂ ಕಾರಣವಾಗಬಹುದು. ಅದೇ ರೀತಿ ಆನ್‌ಲೈನ್ ಶಾಪಿಂಗ್ ಅಗತ್ಯ ಪೂರೈಸುವ ಸಾಧನವಾಗಬಹುದು; ನಿಯಂತ್ರಣವಿಲ್ಲದ ಆಸೆಗಳ ಬಾಗಿಲಾಗಬಹುದು. ಹೀಗಾಗಿ ಪ್ರತಿಯೊಂದು ಖರೀದಿಗೂ ಮುನ್ನ ಒಂದು ಪ್ರಶ್ನೆ ಕೇಳಿಕೊಳ್ಳಬೇಕಾಗಿದೆ "ನನಗೆ ಇದು ನಿಜವಾಗಿಯೂ ಬೇಕೇ?" ಎರಡನೇ ಪ್ರಶ್ನೆ "ಇದನ್ನು ಈಗಲೇ ಖರೀದಿಸಬೇಕೇ?" ಮೂರನೇ ಪ್ರಶ್ನೆ "ಇದು ಇಲ್ಲದಿದ್ದರೆ ನನ್ನ ಜೀವನದಲ್ಲಿ ನಿಜವಾದ ಸಮಸ್ಯೆ ಉಂಟಾಗುತ್ತದೆಯೇ?" ಈ ಮೂರು ಪ್ರಶ್ನೆಗಳಿಗೆ ಉತ್ತರ ಸಿಗದಿದ್ದರೆ, ಕಾರ್ಟ್‌ಗೆ ಸೇರಿಸುವ ಬದಲು ಆ ವಸ್ತುವನ್ನು ಮನಸ್ಸಿನಿಂದಲೇ ಹೊರಹಾಕುವುದು ಉತ್ತಮ. ಏಕೆಂದರೆ ಮಾರುಕಟ್ಟೆಯ ಕೆಲಸ ನಮ್ಮ ಹಣವನ್ನು ಖರ್ಚು ಮಾಡಿಸುವುದು; ನಮ್ಮ ಕೆಲಸ ನಮ್ಮ ಹಣದ ಮೌಲ್ಯವನ್ನು ಅರಿಯುವುದು. ಮನುಷ್ಯನಿಗೆ ಅಗತ್ಯಗಳು ಎಂದಿಗೂ ಇರುತ್ತವೆ. ಆದರೆ ಅಗತ್ಯಗಳಿಗೆ ಅಂತ್ಯವಿದೆ; ಆಸೆಗಳಿಗೆ ಅಂತ್ಯವಿಲ್ಲ. ಒಂದು ಆಸೆ ಈಡೇರಿದ ಕೂಡಲೇ ಮತ್ತೊಂದು ಹುಟ್ಟುತ್ತದೆ. ಮಾರುಕಟ್ಟೆ ಆ ಆಸೆಗೆ ಆಹಾರ ನೀಡುತ್ತಲೇ ಇರುತ್ತದೆ. ಹೀಗಾಗಿ ಇಂದಿನ ದೊಡ್ಡ ಸವಾಲು ವಸ್ತುಗಳ ಕೊರತೆ ಅಲ್ಲ; ಆಸೆಗಳ ನಿಯಂತ್ರಣ. ಮನೆ ಚಿಕ್ಕದಾಗಿದ್ದರೂ ವಸ್ತುಗಳು ಹೆಚ್ಚುತ್ತಿವೆ. ವಾರ್ಡ್ರೋಬ್ ತುಂಬಿದ್ದರೂ "ಧರಿಸಲು ಬಟ್ಟೆ ಇಲ್ಲ" ಎನ್ನುವ ಸ್ಥಿತಿ. ಅಡುಗೆಮನೆ ತುಂಬಿದ್ದರೂ "ಹೊಸ ಉಪಕರಣ ಬೇಕು" ಎನ್ನುವ ಮನಸ್ಥಿತಿ. ಮೊಬೈಲ್‌ನಲ್ಲಿ ನೂರಾರು ಸಂಪರ್ಕಗಳಿದ್ದರೂ ಒಂಟಿತನ. ಬ್ಯಾಂಕ್‌ನಲ್ಲಿ ಹಣ ಇದ್ದರೂ ನೆಮ್ಮದಿ ಇಲ್ಲ. ವಸ್ತುಗಳು ಹೆಚ್ಚಾದಂತೆ ಜೀವನ ಸುಲಭವಾಗಬೇಕಿತ್ತು; ಆದರೆ ಕೆಲವೊಮ್ಮೆ ವಸ್ತುಗಳ ನಿರ್ವಹಣೆಯೇ ಜೀವನದ ದೊಡ್ಡ ಕೆಲಸವಾಗುತ್ತಿದೆ. ಕೊನೆಗೆ ನಾವು ನಮ್ಮನ್ನೇ ಕೇಳಿಕೊಳ್ಳಬೇಕಾದ ಪ್ರಶ್ನೆ ಇದು, ನಾವು ವಸ್ತುಗಳನ್ನು ಖರೀದಿಸುತ್ತಿದ್ದೇವೆಯೇ, ಅಥವಾ ವಸ್ತುಗಳೇ ನಮ್ಮನ್ನು ಖರೀದಿಸುತ್ತಿವೆಯೇ? ನಮ್ಮ ಅಗತ್ಯಗಳನ್ನು ನಾವು ನಿರ್ಧರಿಸುತ್ತಿದ್ದೇವೆಯೇ, ಅಥವಾ ಜಾಹೀರಾತುಗಳು ನಮ್ಮ ಅಗತ್ಯಗಳನ್ನು ನಿರ್ಧರಿಸುತ್ತಿವೆಯೇ? "ನನಗೆ ಬೇಕು" ಎಂಬ ಮಾತಿನ ಹಿಂದೆ ನಿಜವಾದ ಅಗತ್ಯವಿದೆಯೇ, ಅಥವಾ ಕ್ಷಣಿಕ ಆಕರ್ಷಣೆಯೇ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಸಮಯ ಬಂದಿದೆ. ಇಲ್ಲದಿದ್ದರೆ ಆನ್‌ಲೈನ್ ಕಾರ್ಟ್ ತುಂಬುತ್ತಲೇ ಹೋಗುತ್ತದೆ, ಮನೆಯ ಕಪಾಟು ತುಂಬುತ್ತಲೇ ಹೋಗುತ್ತದೆ, ಬ್ಯಾಂಕ್ ಖಾತೆ ಖಾಲಿಯಾಗುತ್ತಲೇ ಹೋಗುತ್ತದೆ; ಆದರೆ ಮನುಷ್ಯನ ತೃಪ್ತಿ ಮಾತ್ರ ಖಾಲಿಯಾಗುತ್ತಲೇ ಹೋಗಬಹುದು. ಆದ್ದರಿಂದ ಆನ್‌ಲೈನ್ ಶಾಪಿಂಗ್ ನಿಲ್ಲಿಸಬೇಕೆಂಬುದಲ್ಲ; ಆನ್‌ಲೈನ್ ಶಾಪಿಂಗ್ ನಮ್ಮನ್ನು ನಿಯಂತ್ರಿಸುವುದನ್ನು ನಿಲ್ಲಿಸಬೇಕು. ಅಗತ್ಯಕ್ಕೆ ಖರೀದಿ ಮಾಡೋಣ, ಆಸೆಗೆ ಬ್ರೇಕ್ ಹಾಕೋಣ. "ಆಫರ್ ಇದೆ" ಎಂಬ ಕಾರಣಕ್ಕೆ ವಸ್ತು ಮನೆಗೆ ಬರಬೇಕಿಲ್ಲ; "ಅಗತ್ಯವಿದೆ" ಎಂಬ ಕಾರಣವಿದ್ದಾಗ ಮಾತ್ರ ಬರಲಿ. ಏಕೆಂದರೆ ಪ್ರತಿಯೊಂದು ವಸ್ತುವಿಗೂ ಬೆಲೆ ಇರುತ್ತದೆ; ಆದರೆ ಅದನ್ನು ಖರೀದಿಸಲು ನಾವು ಕೊಡುವ ಹಣದ ಹಿಂದೆ ನಮ್ಮ ಶ್ರಮ, ಸಮಯ ಮತ್ತು ಬದುಕಿನ ಒಂದು ಭಾಗ ಇರುತ್ತದೆ. ಕಾರ್ಟ್ ತುಂಬಿಸುವುದು ಸುಲಭ; ಬದುಕನ್ನು ಅರ್ಥಪೂರ್ಣವಾಗಿ ತುಂಬಿಸುವುದು ಕಷ್ಟ. ಆ ಕಷ್ಟವನ್ನು ಕಲಿಯದಿದ್ದರೆ, ನಾಳೆ ನಮ್ಮ ಮನೆಗಳಲ್ಲಿ ವಸ್ತುಗಳೇ ತುಂಬಿರಬಹುದು ಆದರೆ ಮನಸ್ಸಿನಲ್ಲಿ ಜಾಗವಿರದೆ ಹೋಗಬಹುದು.



ಅನಂತ ಪಪ್ಪು,
ಬೆಳಗಾವಿ
ಮೋ:9448527870

# ಸರ್ಜಾಪುರದಲ್ಲಿ ರಾಷ್ಟ್ರೀಯ ಪೋಷಣ್ ಮಾಸಾಚರಣೆ

**ಗಜೇಂದ್ರಗಡ:** ಅಪೌಷ್ಟಿಕತೆ ನಿವಾರಣೆಗೆ ಪೌಷ್ಟಿಕಾಂಶವುಳ್ಳ ಆಹಾರ ಅತ್ಯವಶ್ಯಕವಾಗಿದ್ದು, ಪ್ರತಿಯೊಬ್ಬರೂ ಪೌಷ್ಟಿಕ ಆಹಾರ ಸೇವನೆ ಮಾಡುವ ಮೂಲಕ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಂಡು ರೋಗ ಮುಕ್ತ ಸಮಾಜವನ್ನಾಗಿ ನಿರ್ಮಿಸಬೇಕೆಂದು ಆಡಳಿತ ವೈದ್ಯಾಧಿಕಾರಿ ಡಾ ಬಸನಗೌಡ ಪವಾಡಿಗೌಡರ ಹೇಳಿದರು.

ಅವರು ಗಜೇಂದ್ರಗಡ ತಾಲೂಕಿನ ಸರ್ಜಾಪುರ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಶಾಂತಗೇರಿ ವಲಯ ಮಟ್ಟದ ರಾಷ್ಟ್ರೀಯ ಪೋಷಣ್ ಮಾಸಾಚರಣೆ ಹಾಗೂ ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪೌಷ್ಟಿಕ ಆಹಾರ ಪ್ರತಿಯೊಬ್ಬ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಾಗಿದೆ ಎಂದರು. ನಂತರ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಸ್ ಡಿ ಬೆನ್ನೂರ ಮಾತನಾಡಿ ದೇಹದ ಆರೋಗ್ಯಕ್ಕೆ ಸಮತೋಲಿತ ಆಹಾರ ಅತ್ಯಗತ್ಯ, ಆಹಾರದ ಕೊರತೆ ಮಾತ್ರವಲ್ಲದೆ ಅತಿಯಾದ ಪೌಷ್ಟಿಕಾಂಶವು ದೇಹಕ್ಕೆ ಅಪಾಯವನ್ನು ತಂದೊಡ್ಡುತ್ತದೆ ಹಾಗಾಗಿ ಅತೀಪೌಷ್ಟಿಕ,ಅಪೌಷ್ಟಿಕ ಆಹಾರಗಳೆರಡು ದೇಹಕ್ಕೆ ಅಪಾಯಕಾರಿಯಾಗಿದೆ

ಅತಿಯಾದ ಪೌಷ್ಟಿಕ ಆಹಾರ ಸೇವನೆಯಿಂದ ದೇಹದ ತೂಕ ವಿಪರೀತವಾಗಿ ಹೆಚ್ಚಿ ಬೊಜ್ಜು ಉಂಟಾಗುತ್ತದೆ ಇದರಿಂದ ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಹೃದಯ ಸಂಬಂಧಿ ಕಾಯಿಲೆಗಳ ಅಪಾಯವನ್ನು ಹೆಚ್ಚಿಸುತ್ತದೆ ಕೆಲವು ವಿಟಮಿನ್ ಗಳು ದೇಹದಲ್ಲಿ ಅತಿಯಾಗಿ ಸಂಗ್ರಹಗೊಂಡರೆ ಅದು ಮೂತ್ರಪಿಂಡ ಮತ್ತು ಲಿವರ್ ಗೆ ಹಾನಿ ಉಂಟುಮಾಡುತ್ತದೆ ಹಾಗೆಯೇ ಅಪೌಷ್ಟಿಕತೆಯಿಂದ ರೋಗ ನಿರೋಧಕ ಶಕ್ತಿ ಕುಂಠಿತಗೊಂಡು ದೇಹದಲ್ಲಿ ಪೌಷ್ಟಿಕಾಂಶಗಳ ಕೊರತೆಯಾದಾಗ ರೋಗಗಳ ವಿರುದ್ಧ ಹೋರಾಡುವ ಶಕ್ತಿ ಕಡಿಮೆಯಾಗಿ ಬೇಗನೆ ಸೋಂಕುಗಳು ತಗಲುತ್ತವೆ ಅಪೌಷ್ಟಿಕತೆ ಇದರಿಂದ ಸದಾ ಆಯಾಸ,ನಿಶ್ಯಕ್ತಿ ಮತ್ತು ತಲೆ ಸುತ್ತು ಬರುತ್ತದೆ ಹಾಗೆ ಕಬ್ಬಿಣಾಂಶ ಕೊರತೆಯಿಂದಾಗಿ ಹಿಮೊಗ್ಲೋಬಿನ್ ಮಟ್ಟ ಕಡಿಮೆಯಾಗಿ ರಕ್ತ ಹೀನತೆ ಉಂಟಾಗುತ್ತದೆ ಮಕ್ಕಳಲ್ಲಿ ಅಪೌಷ್ಟಿಕತೆ ಉಂಟಾದರೆ ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಸಂಪೂರ್ಣವಾಗಿ ಕುಂಠಿತಗೊಳ್ಳುತ್ತದೆ ಆದ್ದರಿಂದ ಆರೋಗ್ಯವಾಗಿರಲು ಪೌಷ್ಟಿಕಾಂಶವುಳ್ಳ ಆಹಾರ, ಹಿತ,ಮಿತವಾದ ಮತ್ತು ಸಮತೋಲಿತ ಆಹಾರ ಅತ್ಯಗತ್ಯ ನಿಮ್ಮ ದಿನ ನಿತ್ಯದ ಆಹಾರದಲ್ಲಿ ಕಾರ್ಬೋಹೈಡ್ರೇಟ್, ಪ್ರೋಟೀನ್,ಕೊಬ್ಬು, ವಿಟಮಿನ್ ಮತ್ತು ಖನಿಜಾಂಶಗಳು ಸರಿಯಾದಪ್ರಮಾಣದಲ್ಲಿರುವಂತೆನೋಡಿಕೊಳ್ಳಬೇಕೆಂದು ಸಲಹೆ ನೀಡಿದರು.



ಅಂಗನವಾಡಿ ಮೇಲ್ವಿಚಾರಕಿ ಸುವರ್ಣ ಹಾನಾಪೂರ ಮಾತನಾಡಿ ಗರ್ಭಿಣಿಯರು, ಬಾಣಂತಿಯರು, ಕಿಶೋರಿಯರು ರಕ್ತ ಹೀನತೆ ಅಲಕ್ಷ ಮಾಡಬಾರದು ಆದ್ದರಿಂದ ರಕ್ತ ಹೀನತೆ ತಡೆಗಟ್ಟಲು ದಿನ ನಿತ್ಯ ಸೇವಿಸುವ ಆಹಾರದಲ್ಲಿ ಸ್ಥಳೀಯವಾಗಿ ಸಿಗುವ ಸೊಪ್ಪು,ತರಕಾರಿ,ಮೊಳಕೆ ಕಾಳು,ಬೇಳೆ ಕಾಳು,ದ್ವಿದಳ ಧಾನ್ಯಗಳು,ಹಣ್ಣು ಹಂಪಲುಗಳನ್ನು ಸೇವಿಸುವುದರಿಂದ ಉತ್ತಮ ಪೌಷ್ಟಿಕಾಂಶಗಳು ದೊರೆಯಲಿದ್ದು ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಲಿದೆ ಎಂದು ಗರ್ಭಿಣಿಯರಿಗೆ ಕಿವಿಮಾತು ಹೇಳಿದರು

ಕಾರ್ಯಕ್ರಮದಲ್ಲಿ ಗರ್ಭಿಣಿಯರಿಗೆ ಸೀಮಂತ, ಮಕ್ಕಳಿಗೆ ಅನ್ನಪ್ರಾಶನ ಕಾರ್ಯಕ್ರಮದ ಜತೆ ವಿವಿಧ ಪೌಷ್ಟಿಕಾಂಶವುಳ್ಳ ಪೌಷ್ಟಿಕ ಆಹಾರದ ಹಾಗೂ ಬರ್ಫಿ, ಲಸ್ಸಿ,ಸಿಹಿ ಪೊಂಗಲ್, ಚಿತ್ರನ್ನ,ಉಪ್ಪಿಟ್ಟು ಇತರೆ ಪೌಷ್ಟಿಕಾಂಶವುಳ್ಳ ಆಹಾರ ಪದಾರ್ಥಗಳನ್ನು ಪ್ರಾತ್ಯಕ್ಷಿಕೆಯೊಂದಿಗೆ ತಾಯಂದಿರಿಗೆ, ಕಿಶೋರಿಯರಿಗೆ ಅರಿವು ಮೂಡಿಸಲಾಯಿತು

ಈ ವೇಳೆ ಶಾಂತಗೇರಿ ವಲಯ ಮಟ್ಟದ ಅಂಗನವಾಡಿ ಕಾರ್ಯಕರ್ತೆಯರಾದ ಸುವರ್ಣ ಚಿಗರಿ,ಸುಜಾತ ಗೌಡ್ರು, ರೇಣುಕಾ ನಾರಾಯಣಪುರ, ಶರಣಮ್ಮ ಚಿಣಿ, ಅಕ್ಕಮಹಾದೇವಿ ಹಳಗೇರಿ,ನಿಂಗಮ್ಮ ಮಾದರ, ಲಕ್ಷ್ಮಿಬಾಯಿ ಮಾದರ, ಶ್ರೀದೇವಿ ಸಜ್ಜನ, ಸುಶೀಲಾ ಶಾಂತಗೇರಿ, ನಾಗರತ್ನ ಲಕ್ಕುಂಡಿ, ಚೆನ್ನಮ್ಮ ಕಾಶಣ್ಣನವರ, ಸುನಂದ ಇಟಗಿ, ಅನ್ನಕ್ಕ ಚಿಣಿ, ಅಕ್ಕಮ್ಮ ಜೋಗಿ, ಸವಿತಾ ಪೂಜಾರ, ಭಾರತಿ ಹಿರೇಮಠ,ಬಸಮ್ಮ ಬೇವಿನಕಟ್ಟಿ, ಅಕ್ಷತಾ ಟೆಕ್ಕೆದ, ಸಮುದಾಯ ಆರೋಗ್ಯ ಅಧಿಕಾರಿ ಮಹಾಂತೇಶ ಮಾದರ,ಆರೋಗ್ಯ ನಿರೀಕ್ಷಣಾಧಿಕಾರಿ ವಿಜಯಕುಮಾರ ತುಕೋಳ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಶೀಲಾ ಪೂಜಾರ,ಆಶಾಕಾರ್ಯಕರ್ತೆಜ್ಯೋತಿನಾಗನೂರ,ಶಾರದಾ ಲಮಾಣಿ ಹಾಗೂ ಗರ್ಭಿಣಿಯರು,ಮಕ್ಕಳ ತಾಯಂದಿರು, ಕಿಶೋರಿಯರು ಹಾಜರಿದ್ದರು.

## ತರಬೇತಿ ಪಡೆದ ಪ್ಯಾರಾ ಲೀಗಲ್ ಸ್ವಯಂ ಸೇವಕರಿಗೆ ಎರಡು ದಿನಗಳ ಪುನಶ್ಚೇತನ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ

**ಗದಗ:** ತರಬೇತಿ ಪಡೆದ ಪ್ಯಾರಾ ಲೀಗಲ್ ಸ್ವಯಂಸೇವಕರಿಗೆ ಸೆ.21ರಿಂದ 22ವರೆಗೆ ಎರಡು ದಿನಗಳ ಪುನಶ್ಚೇತನ ತರಬೇತಿ ಕಾರ್ಯಕ್ರಮವನ್ನು ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಶ್ರೀಮತಿ ನಾಗವೇಣಿ ರವರು ಚಾಲನೆ ನೀಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ನಿರ್ದೇಶನಾಲಯ (ಗದಗ) ಹಾಗೂ ಔಟ್ಲಾಡ್ ಇಂಡಿಯಾ(OutlawedIndia),ಬೆಂಗಳೂರು ಇವರ ಸಹಯೋಗದೊಂದಿಗೆ ಜಿಲ್ಲಾ ಆವರಣ ಎಡಿಆರ್ ಕಟ್ಟಡದಲ್ಲಿ ಎರಡು ದಿನಗಳ ಪುನಶ್ಚೇತನ ತರಬೇತಿ ಕಾರ್ಯಕ್ರವನ್ನು ಶ್ರೀಮತಿ ನಾಗವೇಣಿ ರವರ ಉದ್ಘಾಡಿಸಿ ಮಾತನಾಡಿ ಜಿಲ್ಲಾ, ತಾಲೂಕು, ಮತ್ತು ಗ್ರಾಮೀಣ ಬಾಗದಲ್ಲಿ ಸ್ವಯಂ ಸೇವಕರಿಗೆ ಸಮುದಾಯ, ಹಲವಾರು ಸವಾಲುಗನ್ನು ಎದುರಿಸಬೇಕಾಗುತ್ತದೆ ಅಂತಹ ಸವಾಲುಗಳ ಕುರಿತು ಎರಡು ದಿನಗಳ ಕಾರ್ಯಾಗಾರದಲ್ಲಿ ಚರ್ಚಿಸಿ ಮತ್ತು ಅವುಗಳಿಗೆ ಯಾವ ರೀತಿ ಎದುರಿಸಬೇಕು ಮತ್ತು ನಮ್ಮ ಸಹಕಾರದ ಅರಿವು ಲಬ್ಯತೆಗಳ ಕುರಿತು ಗಮನಹರಿಸಲು ಸಲಹೆ ನೀಡಿದರು. ಗದಗ ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷರು ಎಮ್ ಎ ಸಂಗನಾಳ ಮಾತನಾಡಿ ಎರಡು ದಿನಗಳ ಪುನಶ್ಚೇತನ ತರಬೇತಿ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು. ಕಾನೂನು ಅರಿವು ಮತ್ತು ತಿಳುವಳಿಯನ್ನು ಸರಳವಾಗಿ ತಿಳಿಸುವ ಸಮುದಾಯದ ಬಾಗವಾಗಿ ಸ್ವಯಂ ಸೇವಕರು ಕಾನೂನಿನ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದರು. ಮುಖ್ಯ ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸದಸ್ಯ ಕಾರ್ಯದರ್ಶಿ, ಸಿ.ಎಸ್. ಶಿವನಗೌಡ್ರ, ಸಂಪನ್ಮೂಲ ವ್ಯಕ್ತಿ ತರಬೇತುದಾರರು 'ಔಟ್ಲಾ ಇಂಡಿಯಾ' ( Out lawed India), ಬೆಂಗಳೂರು ಮುಖ್ಯ ಕಾನೂನು ನೆರವು ರಕ್ಷಣಾ ವಕೀಲರು ಜೋಮಿ ಜಾಯ್, ಮುಖ್ಯ ಕಾನೂನು ನೆರವು ರಕ್ಷಣಾ ವಕೀಲರು ಎಸ್.ವಿ.ಗ್ರಾಮ್ಪುರೋಹಿತ್,ಸಹಾಯಕ ಕಾನೂನು ನೆರವು ರಕ್ಷಣಾ ವಕೀಲರು ಗುರುರಾಜ್ ಗೌರಿ, ಸ್ವಯಂ ಸೇವಾ ಸಹಾಯಕರು ಉಪಸ್ಥಿತರಿದ್ದರು.




SAMALOCHANE RANEBENNURSUDDI KANNADA DAILY MORNING, OWNER, PUBLISHER BY: RAJESHWARI S OLEKAR, PUBLISHED FROM: H.NO, 58 MAIN ROAD, YAKALASAPUR, SUB DISTRICT RANEBENNUR, HAVERI, KARNATAKA-581115, PRINTED AT: VEDAMURTHY S T, GAYATHRI PUBLICATIONS, H.NO, 720, NEKAR COLONY, INDUSTRIAL AREA, HAVERI, KARNATAKA- 581115, EDITOR BY: RAJESHWARI S OLEKAR